ಕರ್ನಾಟಕದಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (ಡಿಪಿಇಪಿ)
ನೆರವಿನ ಕಾರ್ಯಕ್ರಮಗಳೇ ಅಥವಾ ಮಾರ್ಗದರ್ಶಿ ನೀತಿಗಳೇ?

ಕರ್ನಾಟಕದಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (ಡಿಪಿಇಪಿ) ದ ರಚನೆ, ಕಾರ್ಯನಿರ್ವಹಣೆ, ಪ್ರಭಾವ ಮತ್ತು ಅದರ ಪರಿಣಾಮಗಳ ಕುರಿತು ಈ ಲೇಖನ ಅವಲೋಕನ ನಡೆಸುತ್ತದೆ. ಕಾರ್ಯಕ್ರಮದ ಅಧಿಕೃತ ಆದೇಶ ಮತ್ತು ಕಾರ್ಯಕ್ಷೇತ್ರದಲ್ಲಿ ಅದರ ಸಿಂಧುತ್ವದ ಕುರಿತು ಮಾಡಿರುವ ಮೌಲ್ಯಮಾಪನ ದಾಖಲೆಯಾಗಿರುವ ಈ ಲೇಖನ, ಕಾರ್ಯಕ್ರಮದ ಮಿತಿಗಳು ಮತ್ತು ಶಿಕ್ಷಣಕ್ಕಾಗಿ ರಾಜ್ಯ ನೀತಿಗಳ ಮೇಲೆ ಅದು ಬೀರಿರುವ ಪ್ರಭಾವಗಳ ಕುರಿತು ಗಮನ ಸೆಳೆಯುತ್ತದೆ.

ಪದ್ಮಾ ಎಸ್‌ಸಾರಂಗಪಾಣಿ, ಎ ಆರ್‌ವಾಸವಿ

ಕಳೆದ ಐದು ವರ್ಷಗಳಲ್ಲಿ ಕರ್ನಾಟಕದಲ್ಲಿ ರಾಜ್ಯ ನೇತೃತ್ವದ ಅಭಿವೃದ್ಧಿ ಎಂಬುದು ಪ್ರಾಥಮಿಕವಾಗಿ ಜಾಗತೀಕರಣ, ಮಾಹಿತಿ ತಂತ್ರಜ್ಞಾನದ ಬೆಳವಣಿಗೆ, ಖಾಸಗೀಕರಣ ಮತ್ತು ಜಾಗತಿಕ ಸ್ಪರ್ಧಾತ್ಮಕತೆಯ ಮೇಲಿನ ವಾಕ್ಚಾತುರ್ಯವನ್ನೇ ಆಧರಿಸಿದೆ. ಕರ್ನಾಟಕದ ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದಂತೆ ವಿವಿಧ ಕ್ಷೇತ್ರಗಳ ಹತ್ತು-ಹಲವು ಬಾಹ್ಯ ನಿಧಿ ಸಂಸ್ಥೆಗಳ ಉಪಸ್ಥಿತಿ ಅಂತಹ ಚರ್ಚೆ ಮತ್ತು ದೃಷ್ಟಿಕೋನಕ್ಕೆ ಮತ್ತಷ್ಟು ಪುಷ್ಟಿ ನೀಡುತ್ತದೆ. ಸರ್ಕಾರದ ದೃಷ್ಟಿಕೋನ ಮತ್ತು ಅಂತರರಾಷ್ಟ್ರೀಯ ಸಾಲ ನೀಡುವ ನಿಧಿ ಸಂಸ್ಥೆಗಳ ಉಪಸ್ಥಿತಿ ಇವೆರಡೂ ರಾಜ್ಯ ಅಭಿವೃದ್ಧಿ ನೀತಿ, ಆಡಳಿತ ಮತ್ತು ರಾಜಕೀಯ ಪ್ರಕ್ರಿಯೆಗಳ ಮೆಲೆ ತನ್ನದೇ ಆದ ಪರಿಣಾಮಗಳನ್ನು ಹೊಂದಿರುತ್ತವೆ.[1]

ಸರ್ಕಾರದ ಹಣಕಾಸು ನಿಧಿಯ ಮೂಲವಾಗಿ, ಅದರಲ್ಲೂ ವಿಶೇಷವಾಗಿ ಅಭಿವೃದ್ಧಿ ಚಟುವಟಿಕೆಗಳಿಗಾಗಿ, ಸಾಲವನ್ನು ಸ್ವೀಕರಿಸುವುದು ನಾಗರಿಕರಾದ ನಮಗೆ ಕಾಳಜಿಯ ವಿಷಯವಾಗಿದೆ. ಈ ಸಾಲವನ್ನು ಯಾವ ರೀತಿಯಲ್ಲಿ ಬಳಕೆ ಮಾಡಿಕೊಳ್ಳಲಾಗುತ್ತದೆ ಹಾಗೂ ಭವಿಷ್ಯದಲ್ಲಿ ಅವುಗಳ ಮರುಪಾವತಿಯ ಬಗೆ ಹೇಗೆ ಎಂಬ ಪ್ರಶ್ನೆಗಳನ್ನು ಈ ಬೃಹತ್ ಸಾಲಗಳು ಸಹಜವಾಗಿಯೇ ಹುಟ್ಟುಹಾಕುತ್ತವೆ. ಕರ್ನಾಟಕ ಸರ್ಕಾರ ಶಿಕ್ಷಣಕ್ಕಾಗಿ ವಿಶ್ವ ಬ್ಯಾಂಕ್‌ನಿಂದ ಸುಮಾರು 600 ಕೋಟಿಗಳಷ್ಟು ಬೃಹತ್ ಮೊತ್ತದ ಸಾಲವನ್ನು ಪಡೆಯುವ ಪ್ರಯತ್ನಗಳ ಕುರಿತ ಇತ್ತೀಚಿಗಿನ ವರದಿಗಳನ್ನು ಅನುಸರಿಸಿ, ಪ್ರಾಥಮಿಕ ಶಿಕ್ಷಣದಲ್ಲಿಅಂತಹ ಬೃಹತ್ ಧನಸಹಾಯವು ಉಂಟುಮಾಡಲಿರುವ ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವ ಒಂದು ಕಾರ್ಯವನ್ನು ನಾವು ಕೈಗೆತ್ತಿಕೊಂಡಿದ್ದೇವೆ. ಬಾಹ್ಯ ನಿಧಿ ಬೆಂಬಲಿತ ಅಂತಹ ಭಾರೀ ಯೋಜನೆಯ ಪ್ರಾತಿನಿಧಿಕ ಪ್ರಕರಣವಾಗಿ ಕರ್ನಾಟಕದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (District Primary Education Program-DPEP) ವನ್ನು (ಇಲ್ಲಿಂದ ಮುಂದಕ್ಕೆ ಡಿಪಿಇಪಿ ಎಂದು ಬಳಸಲಾಗಿದೆ) ಆಯ್ಕೆ ಮಾಡಿಕೊಳ್ಳಲಾಗಿದೆ. ಯೋಜಿಸಲ್ಪಟ್ಟ ಹಾಗೂ ಮಾರ್ಗದರ್ಶಿಸಲ್ಪಟ್ಟ ಸಾರ್ವಜನಿಕ ನೀತಿಗಳು ತಮ್ಮ ಬಲ ಕಳೆದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಧನಸಹಾಯ ಪಡೆದ ಕಾರ್ಯಕ್ರಮಗಳ ಪ್ರಭಾವವೇನು ಎಂಬುದನ್ನು ಎತ್ತಿ ತೋರಿಸುವ ಪ್ರಕರಣವಾಗಿ ಈ ಅವಲೋಕನವನ್ನು ನಡೆಸಲಾಗಿದೆ.

ಈ ಲೇಖನವು ಕರ್ನಾಟಕದ ಡಿಪಿಇಪಿಯ ಒಂದು ಸಮಗ್ರ ಅವಲೋಕನ ಎಂದು ಇಲ್ಲಿ ಹೇಳಿಕೊಳ್ಳುತ್ತಿಲ್ಲ. ಡಿಪಿಇಪಿಯ ಸಾರ್ವಜನಿಕ ದಾಖಲೆಗಳು,[2] ಎರಡು ಬಾರಿ ನಡೆಸಲಾದ ಕ್ಷೇತ್ರಭೇಟಿಗಳು, ಮತ್ತು ಈಗಾಗಲೇ ಡಿಪಿಇಪಿಯೊಂದಿಗೆ ತೊಡಗಿಸಿಕೊಂಡಿರುವ ಅಧಿಕಾರಿ ವರ್ಗ ಹಾಗೂ ಮತ್ತು ಸ್ವಯಂ ಸೇವಾ ಸಂಸ್ಥೆಗಳೊಂದಿಗೆ ನಡೆಸಲಾದ ಸಂವಾದಗಳ ಆಧಾರದಲ್ಲಿ ನಾವು ಕಾರ್ಯಕ್ರಮದ ಕೆಲವು ಅಂಶಗಳನ್ನು ಗಮನಿಸಿದ್ದೇವೆ ಮತ್ತು ಕೆಲವು ಪ್ರಶ್ನೆಗಳನ್ನು ಎತ್ತಿದ್ದೇವೆ. ಕಾರ್ಯಕ್ರಮದ ಒಂದು ಭಾಗವಾಗಿ ತನ್ನ ಯೋಜನಾ ಅವಧಿಯ ಏಳು ವರ್ಷಗಳನ್ನು ಈಗಾಗಲೇ ಪೂರ್ಣಗೊಳಿಸಿರುವುದರಿಂದ ಕಾರ್ಯಕ್ರಮ ಬೀರಿರುವ ಪ್ರಭಾವ ಮತ್ತು ಅದು ಉಂಟುಮಾಡಿರುವ ಪರಿಣಾಮಗಳ ಕುರಿತಂತೆ ಏಳುತ್ತಿರುವ ಮೊದಲ

ಪ್ರಶ್ನೆಯೆಂದರೆ; ಸಾಲದ ಹಣವನ್ನು ಯಾವ ರೀತಿಯಲ್ಲಿ ಬಳಸಿಕೊಳ್ಳಲಾಯಿತು ಮತ್ತು ಕಾರ್ಯಕ್ರಮದ ಉದ್ದೇಶಗಳನ್ನು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ಈಡೇರಿಸಲು ಸಾಧ್ಯವಾಯಿತು? ನಮ್ಮ ಲೇಖನದ ಮೊದಲನೆಯ ಭಾಗದಲ್ಲಿ ಡಿಪಿಇಪಿ ಕಾರ್ಯಕ್ರಮವನ್ನು ಪರಿಚಯಿಸಿದ ನಂತರ, ಎರಡನೆಯ ಭಾಗ ಕರ್ನಾಟಕದಲ್ಲಿ ನಡೆದ ಮೊದಲನೆಯ ಹಂತದ ಡಿಪಿಇಪಿ ಕುರಿತ ನಮ್ಮ ನಮ್ಮ ಪರಿಶೋಧನೆಯನ್ನು ಪ್ರಸ್ತುತಪಡಿಸುತ್ತದೆ. ನೀತಿ ನಿರೂಪಣೆಗಳ ಮೇಲೆ, ಸಾಂಸ್ಥಿಕ ರಚನೆಗಳು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ನಿರ್ಧಾರ ತೆಗೆದುಕೊಳ್ಳುವುದೇ ಮುಂತಾದ ಸಂಗತಿಗಳ ಮೇಲೆ ಡಿಪಿಇಪಿಯಂತಹ ಯೋಜನಾ ಆಧಾರಿತ ಕಾರ್ಯಕ್ರಮಗಳು ಮತ್ತು ಅದನ್ನು ಬೆಂಬಲಿಸುವ ಧನ ಸಹಾಯ ಸಂಸ್ಥೆಗಳು ಉಂಟುಮಾಡುವ ಪರಿಣಾಮಗಳ ಕುರಿತ ಪ್ರಶ್ನೆಗಳನ್ನು ನಮ್ಮ ಲೇಖನದ ಮೂರನೇ ಭಾಗವು ವಿಶ್ಲೇಷಿಸುತ್ತದೆ. ದೆಹಲಿ ಮತ್ತು ಬೆಂಗಳೂರಿನಲ್ಲಿ ಜಾಗತಿಕ ಬಂಡವಾಳ ಪ್ರವೇಶದ ಹಿನ್ನೆಲೆಯಲ್ಲಿ ರಾಜ್ಯದ ಉದಯೋನ್ಮುಖ ಪಾತ್ರ ಮತ್ತು ಸಾರ್ವಜನಿಕ ಶಿಕ್ಷಣ ಕ್ಷೇತ್ರದ ಮೇಲೆ ಮಾತ್ರವಲ್ಲದೆ ಇಡೀ ಸಾಮಾಜಿಕ ವಲಯದ ಮೇಲೆ ಅದು ಬೀರುತ್ತಿರುವ ಪ್ರಭಾವಕ್ಕೆ ಸಂಬಂಧಿಸಿದಂತೆ ಈ ಪ್ರಶ್ನೆಗಳು ಇವೆ.

I
ಡಿಪಿಇಪಿ

1990ಕ್ಕೆ ಮುನ್ನ ಶಿಕ್ಷಣದಲ್ಲಿ ಕೆಲವು ದೊಡ್ಡ ಪ್ರಮಾಣದ ವಿದೇಶೀ ಅನುದಾನಿತ ಯೋಜನೆಗಳು ಇದ್ದವು. ಕೆಲವು ಅನೌಪಚಾರಿಕ ಶಿಕ್ಷಣ ಕೇಂದ್ರಗಳಿಗೆ ಯುನಿಸೆಫ್(UNICEF) ಮತ್ತು ಐಎಲ್‌ಓ (ILO) ಗಳು ಧನ ಸಹಾಯ ನೀಡಿದ್ದವು. ಈಗ ಡಿಎಫ್ಐಡಿ ಎಂದು ಕರೆಯಲಾಗುವ ಯುನೈಟೆಡ್‌ಕಿಂಗ್‌ಡಂನ ಓಡಿಎ ಆಂಧ್ರಪ್ರದೇಶ್‌ಪ್ರೈಮರಿ ಎಜ್ಯುಕೇಶನ್‌ಪ್ರೋಗ್ರಾಂ (ಎಪಿಪಿಇಪಿ) ಗೆ ಧನಸಹಾಯ ನೀಡಿತ್ತು. ಡಚ್‌ನಿಧಿಯ ನೆರವಿನಿಂದ 'ಶಿಕ್ಷಾ ಕರ್ಮಿ' ಮತ್ತು ಸಿಡಾ (SIDA) ನೆರವಿನಿಂದ 'ಲೋಕ್‌ಜಂಬಿಶ್' ಕಾರ್ಯಕ್ರಮಗಳು ಮಾತ್ರ ಕಾರ್ಯಾಚರಿಸುತ್ತಿದ್ದವು. ಇವೆಲ್ಲವೂ 'ಧನ ಸಹಾಯ' ಬೆಂಬಲದಿಂದ ನಡೆಯುತ್ತಿದ್ದ ಕಾರ್ಯಕ್ರಮಗಳಾಗಿದ್ದವು. ವಿಶ್ವ ಬ್ಯಾಂಕ್‌ಅತಿ ದೊಡ್ಡ ಸಾಲದಾತ ಸಂಸ್ಥೆಯಾಗಿದ್ದು, 1990ರಿಂದ ಈಚೆಗೆ ಭಾರತ ಸರ್ಕಾರವು ಪ್ರಾಥಮಿಕ ಶಿಕ್ಷಣಕ್ಕಾಗಿ ಸಾಲದ ರೂಪದಲ್ಲಿ ನಿಧಿಯನ್ನು ಸ್ವೀಕರಿಸಲು ಪ್ರಾರಂಭಿಸಿತು. ಯೂರೋಪಿಯನ್ ಯೂನಿಯನ್‌ಕೂಡ ಒಂದು ದೊಡ್ಡ ಮಟ್ಟದ ದತ್ತಿ ನಿಧಿ ಸಂಸ್ಥೆಯಾಗಿದೆ. ನಿಧಿಯ ಪ್ರಮುಖ ಭಾಗವನ್ನು ಸಾಲದ ರೂಪದಲ್ಲಿ ಒದಗಿಸುವ ವಿಶ್ವ ಬ್ಯಾಂಕ್‌ನ ದೃಷ್ಟಿಯಲ್ಲಿ ಇದು ರಚನಾತ್ಮಕ ಹೊಂದಾಣಿಕೆ ಕಾರ್ಯಕ್ರಮದ ಒಟ್ಟಾರೆ ನೀತಿಯಲ್ಲಿನ 'ಸುರಕ್ಷತಾ ಖಾತರಿಯ ಜಾಲ'ದೊಂದಿಗೆ ಜೋಡಿಸಲ್ಪಟ್ಟಿರುವುದು ಕಂಡುಬರುತ್ತದೆ. ವಾಸ್ತವದಲ್ಲಿ, ಡಿಪಿಇಪಿಗೂ ಮುನ್ನ ಉತ್ತರಪ್ರದೇಶದಲ್ಲಿ ವಿಶ್ವ ಬ್ಯಾಂಕ್‌ನಿಂದ ಧನ ಸಹಾಯ ಪಡೆದ ಮೊದಲ ಕಾರ್ಯಕ್ರಮವನ್ನು 'ಸುರಕ್ಷತಾ ಖಾತರಿ ಜಾಲದ' ಕಾರ್ಯಕ್ರಮ ಎಂದು ಉಲ್ಲೇಖಿಸಲಾಗಿದೆ. 1993ರಲ್ಲಿ ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯು ವಿವಿಧ ನಿಧಿ ಸಂಸ್ಥೆಗಳ ನೆರವು ಒಂದೆಡೆಗೆ ಹರಿದು ಬರಲು ಸಾಧ್ಯವಾಗುವಂತಹ ಒಂದು ಮೂಲ ಯೋಜನೆಯನ್ನಾಗಿ ಡಿಪಿಇಪಿ (DPEP) ಯನ್ನು ರೂಪಿಸಿತು (MHRD 1993). ಡಿಪಿಇಪಿ ಈ ದೃಷ್ಟಿಯಿಂದ ನೋಡಿದರೆ ನಿಧಿಯನ್ನು ಪಡೆದ ನಂತರ ಅದನ್ನು ವಿನಿಯೋಗಿಸಲು ರೂಪಿಸಲಾದ ಒಂದು ಕಾರ್ಯಕ್ರಮವಾಗಿದೆ. ಮೊದಲಿಗೆ ಸರ್ಕಾರದಿಂದ ರೂಪಿತಗೊಂಡು ತರುವಾಯ ಹಣಕಾಸನ್ನು ಹೊಂದಿಸಲಾದ ಕಾರ್ಯಕ್ರಮವಾಗಿರಲಿಲ್ಲ.

1994ರಲ್ಲಿ ಮೊದಲ ಹಂತದ ಕಾರ್ಯಕ್ರಮವು 7 ರಾಜ್ಯಗಳ ಸುಮಾರು 42 ಜಿಲ್ಲೆಗಳನ್ನು ಒಳಗೊಂಡಿತ್ತು. ಮಹಿಳಾ ಸಾಕ್ಷರತೆಯ ಮಟ್ಟ ಕಡಿಮೆ ಇರುವ ಜಿಲ್ಲೆಗಳನ್ನು ಇದಕ್ಕಾಗಿ ಆಯ್ಕೆ ಮಾಡಿಕೊಳ್ಳಬೇಕಾಗಿತ್ತು. ಆ ನಂತರದ ಹಂತಗಳಲ್ಲಿ ಈ ಕಾರ್ಯಕ್ರಮ ಹೆಚ್ಚಿನ ಜಿಲ್ಲೆಗಳು ಹಾಗೂ ಹೆಚ್ಚಿನ ರಾಜ್ಯಗಳಿಗೆ ವಿಸ್ತರಿಸಿತು.

ನಾಲ್ಕನೇ ಹಂತ ಕೊನೆಗೊಳ್ಳುವ ಹೊತ್ತಿಗೆ ಅದು 13 ರಾಜ್ಯಗಳಿಗೆ ವ್ಯಾಪಿಸಿ, ಒಟ್ಟು ಸುಮಾರು 500ಕ್ಕೂ ಹೆಚ್ಚಿನ ಜಿಲ್ಲೆಗಳಿಂದ ಆಯ್ದ 242 ಜಿಲ್ಲೆಗಳನ್ನು ಒಳಗೊಳ್ಳಲಿದೆ.

ಈ ಕಾರ್ಯಕ್ರಮವು 7 ವರ್ಷಗಳ ಯೋಜನಾ ವ್ಯಾಪ್ತಿಯನ್ನು ಹೊಂದಿದ್ದು, ಈ ಕೆಳಗಿನವುಗಳನ್ನು ಸಾಧಿಸಲು ಉದ್ದೇಶಿಸಲಾಗಿದೆ:

- ಗ್ರಾಮೀಣ ನಾಯಕತ್ವ, ಸ್ವಯಂ ಸೇವಾ ಸಂಸ್ಥೆಗಳು, ಶಾಲೆಗಳು, ಜಿಲ್ಲೆ ಮತ್ತು ಬ್ಲಾಕ್‌ಮಟ್ಟದ ಸಿಬ್ಬಂದಿಗಳನ್ನು ಒಳಗೊಂಡು ಜಿಲ್ಲಾ ಮಟ್ಟದ ವಿಕೇಂದ್ರೀಕೃತ ಮತ್ತು ಸಹಭಾಗಿತ್ವದ ಯೋಜನೆ ಮತ್ತು ಆಡಳಿತ.
- ಹೆಣ್ಣು ಮಕ್ಕಳು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರಿದ ಮಕ್ಕಳ ಶಾಲಾ ದಾಖಲಾತಿಯನ್ನು ಹೆಚ್ಚಿಸಲು ಮತ್ತು ದಾಖಲಾದ ಮಕ್ಕಳು ಶಾಲೆಯನ್ನು ತೊರೆಯದೆ ಶಿಕ್ಷಣದಲ್ಲಿ ಮುಂದುವರೆಯುವಂತೆ ಮಾಡಲು (ಪ್ರಾಥಮಿಕ ಶಿಕ್ಷಣದಲ್ಲಿ ಲಿಂಗಾಧಾರಿತ ಹಾಗೂ ಜಾತಿ ಮತ್ತು ಬುಡಕಟ್ಟು ಗುಂಪುಗಳ ಸೇರ್ಪಡೆಗೆ 'ಅಡೆತಡೆ'ಗಳಿರುವುದನ್ನು ಗುರುತಿಸಲಾಗಿರುವ ಹಿನ್ನೆಲೆಯಲ್ಲಿ) ನಿರ್ದಿಷ್ಟ ಕಾರ್ಯತಂತ್ರಗಳು.
- ಮಕ್ಕಳ ಕಲಿಕಾ ಸಾಧನೆಯ ಹೆಚ್ಚಳಕ್ಕಾಗಿ ಶಿಕ್ಷಕರ ಸಾಮರ್ಥ್ಯ ವೃದ್ಧಿಯ ಕಾರ್ಯಾಗಾರಗಳನ್ನು ನಡೆಸುವುದು ಮತ್ತು ಹೊಸ ಕಲಿಕಾ ಬೋಧನಾ ಸಾಮಗ್ರಿಗಳನ್ನು ತಯಾರು ಮಾಡುವುದರತ್ತ ಹೆಚ್ಚಿನ ಗಮನವಹಿಸುವುದು.
- ಜಿಲ್ಲಾ ಮತ್ತು ಬ್ಲಾಕ್‌ಮಟ್ಟದಲ್ಲಿ ಆಡಳಿತದ ಸಾಮರ್ಥ್ಯವನ್ನು ವೃದ್ಧಿಸುವುದು.
- ದತ್ತಾಂಶ ಸಂಗ್ರಹ ಮತ್ತು ಶೈಕ್ಷಣಿಕ ಆಡಳಿತ ನಿರ್ವಹಣೆ ಮತ್ತು ಮಾಹಿತಿ ವ್ಯವಸ್ಥೆ (EMIS-Education Management and Information System) ಯನ್ನು ಸ್ಥಾಪಿಸುವುದು [MHRD 1995].

ಬಾಹ್ಯ ಹಣಕಾಸಿನ ನೆರವಿನಿಂದ ನಡೆಸಲಾದ ಎಪಿಪಿಇಪಿ (APPEP) ಯಂತಹ ಈ ಹಿಂದಿನ ಯೋಜನೆಗಳಲ್ಲಿ ಕಾರ್ಯಕ್ರಮದ ಪರಿಕಲ್ಪನೆಯನ್ನು ರೂಪಿಸುವುದು ಸೇರಿದಂತೆ, ತರಬೇತಿ, ಅನುಷ್ಠಾನ ಮತ್ತು ಮೌಲ್ಯಮಾಪನದಂತಹ ಹಲವು ಅಂಶಗಳು ಮತ್ತು ಹಂತಗಳಲ್ಲಿ ಹಣಕಾಸು ನೆರವು ನೀಡುವ ಸಂಸ್ಥೆಗಳ ಗಮನಾರ್ಹ ಉಪಸ್ಥಿತಿ ಇರುತ್ತಿತ್ತು. ಇದಕ್ಕೆ ವ್ಯತಿರಿಕ್ತವಾಗಿ, ಡಿಪಿಇಪಿ (DPEP) ಕಾರ್ಯಕ್ರಮದಲ್ಲಿ ಸಾಲ ನೀಡುವ ಸಂಸ್ಥೆಗಳ (ವಿಶ್ವ ಬ್ಯಾಂಕ್‌ಅಥವಾ ಯುರೋಪಿಯನ್‌ಕಮಿಶನ್) ಯಾವುದೇ ಸ್ಪಷ್ಟ, ನೇರ ಒಳಗೊಳ್ಳುವಿಕೆ ಇಲ್ಲ. ಭಾರತ ಸರ್ಕಾರದ ಮಧ್ಯಸ್ಥಿಕೆ ಇಲ್ಲದೆ ಕಾರ್ಯಕ್ಷೇತ್ರದ ಯಾವುದೇ ವಿಚಾರದಲ್ಲಿ ಅವು ನೇರವಾಗಿ ಪ್ರವೇಶ ಪಡೆಯುವುದು ಅಥವಾ ಮಾತುಕತೆ ನಡೆಸುವುದು ಸಾಧ್ಯವಿಲ್ಲ[3]. ಕಾರ್ಯಕ್ರಮಕ್ಕೆ ಅಗತ್ಯವಾದ ತಾಂತ್ರಿಕ ಬೆಂಬಲವನ್ನು ಭಾರತ ಸರ್ಕಾರದ ಸಾರ್ವಜನಿಕ ವಲಯದ ಕಂಪೆನಿ 'ಎಡ್‌ಸಿಲ್' (Ed Cil – Educational Consultants India Limited) ನೀಡಿದರೆ, ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಡಿಪಿಇಪಿ ವಿಭಾಗ ಕಾರ್ಯಕ್ರಮದ ಮೇಲ್ವಿಚಾರಣೆ ನಡೆಸುತ್ತದೆ. ಆದಾಗ್ಯೂ, ಜಿಲ್ಲಾ ಮಟ್ಟದ ಯೋಜನೆಗಳ ತಯಾರಿ ಮತ್ತು ಕಾರ್ಯಕ್ರಮಗಳ ಎಲ್ಲ ಹಣಕಾಸಿನ ವ್ಯವಹಾರಗಳಿಗೆ (ಟೆಂಡರ್‌ಗಳು ಮತ್ತು ಬ್ಯಾಲೆನ್ಸ್‌ಶೀಟ್‌ಗಳು ಸೇರಿದಂತೆ) ಬಳಸಿರುವ ನಮೂನೆಗಳು ವಿಶ್ವ ಬ್ಯಾಂಕ್‌ನ ಸಲಹೆಗಾರರು ಸೂಚಿಸಿದ ಮಾದರಿಯನ್ನೆ ನಿಕಟವಾಗಿ ಅನುಸರಿಸುವುದು ಕಂಡುಬರುತ್ತದೆ. ಕಾರ್ಯಕ್ರಮದಲ್ಲಿ ಅನೌಪಚಾರಿಕ ಮಾದರಿಯ ಸಂವಹನಗಳು ಹಾಗೂ ಪ್ರಭಾವಿಸುವ ಅಂಶಗಳು ಇರುವುದನ್ನು ಇದು ಸೂಚಿಸುತ್ತದೆ. ಸಾಲ ನೀಡುವ ಸಂಸ್ಥೆಗಳು ಕಾರ್ಯಕ್ರಮದ ಅನುಷ್ಠಾನದ ಎಲ್ಲ ಅಂಶಗಳ ಮೇಲ್ವಿಚಾರಣೆ ನಡೆಸಲು ಎರಡು ವರ್ಷಕ್ಕೊಮ್ಮೆ ನಡೆಯುವ ಜಂಟಿ ಅವಲೋಕನ ನಿಯೋಗದಲ್ಲಿ ಭಾರತ ಸರ್ಕಾರದ ಪ್ರತಿನಿಧಿಗಳೊಂದಿಗೆ ಭಾಗವಹಿಸುತ್ತಾರೆ.

ಕಾರ್ಯಕ್ರಮದ ಅನುಷ್ಠಾನದ ಜವಾಬ್ದಾರಿಯು ಪ್ರತಿ ರಾಜ್ಯದಲ್ಲೂ ಡಿಪಿಇಪಿ ಮಾರ್ಗಸೂಚಿಗಳಿಗೆ ಅನುಗುಣವಾಗಿ ರಚಿಸಲಾಗಿರುವ ಸ್ವತಂತ್ರ ಸಮಿತಿ ಅಥವಾ ಸೊಸೈಟಿಯದಾಗಿರುತ್ತದೆ [MHRD 1993] ಮತ್ತು ಐಎಎಸ್‌ಅಧಿಕಾರಿಯೊಬ್ಬರು ಅದರ ನೇತೃತ್ವ ವಹಿಸಿರುತ್ತಾರೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಮತ್ತು ಶಿಕ್ಷಣ ಇಲಾಖೆ ಹಾಗೂ ಡಿಎಸ್‌ಇಆರ್‌ಟಿ (DSERT-Department of State Education Research and Training) ಯ ಇತರ ಸದಸ್ಯರು ಇದರ ಮಂಡಳಿಯ ಪದನಿಮಿತ್ತ ಸದಸ್ಯರಾಗಿರುತ್ತಾರೆ. ಆದಾಗ್ಯೂ, ಈ ಸೊಸೈಟಿಯು ಶಿಕ್ಷಣ ಇಲಾಖೆಯ ನಿಯಮಾವಳಿಗಳು ಮತ್ತು ಶ್ರೇಣೀಕೃತ ಸಂರಚನೆಗಳಿಂದ ಸಂಪೂರ್ಣ ಸ್ವತಂತ್ರವಾಗಿ ಕಾರ್ಯನಿರ್ವಹಿಸಬಹುದಾಗಿದೆ. ನಿಧಿಗೆ ಸಂಬಂಧಿಸಿದ ವಿಚಾರಗಳಲ್ಲಿ, ತಾಂತ್ರಿಕ ಸಲಹೆಗಳನ್ನು ಪಡೆಯಲು ಸಲಹೆಗಾರರನ್ನು ಆಯ್ಕೆಮಾಡಿಕೊಳ್ಳುವಲ್ಲಿ, ಕಾರ್ಯಕ್ರಮವನ್ನು ರೂಪಿಸಿ ಅನುಷ್ಠಾನಗೊಳಿಸುವುದರಲ್ಲಿ ಡಿಪಿಇಪಿ ಸೊಸೈಟಿಯು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ (MHRD) ಡಿಪಿಇಪಿ ಡೆಸ್ಕ್(DPEP Desk) ಮತ್ತು ನವದೆಹಲಿಯ ಎಡ್‌ಸಿಲ್(Ed Cil) ನೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುತ್ತದೆ. ಕರ್ನಾಟಕದಂತೆಯೇ ಹಲವು ರಾಜ್ಯಗಳಲ್ಲಿ ಡಿಪಿಇಪಿಯ ಅನೇಕ ಕಾರ್ಯಕ್ರಮಗಳು ಡಿಪಿಇಪಿಯ ಸಲಹೆಗಾರರಾಗಿ ಕಾರ್ಯನಿರ್ವಹಿಸುವ ಆಯಾ ರಾಜ್ಯಗಳ ಡಿಎಸ್‌ಸಿಆರ್‌ಟಿಗಳು ಮಾತ್ರವಲ್ಲದೆ ರಾಜ್ಯ ಯೋಜನಾ ಕಚೇರಿಗಳ ಮೂಲಕ ರೂಪಿಸಲ್ಪಟ್ಟಿವೆ. ಇದೇ ಉದ್ದೇಶಕ್ಕಾಗಿ ರಚಿಸಲಾಗಿರುವ ಬ್ಲಾಕ್‌ಸಂಪನ್ಮೂಲ ಕೇಂದ್ರಗಳು ಮತ್ತು ಸಮೂಹ ಸಂಪನ್ಮೂಲ ಕೇಂದ್ರಗಳ ಕಾರ್ಯಜಾಲಗಳ ಮೂಲಕ ಎಲ್ಲ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತದೆ.

ಧನ ಸಹಾಯ

ಕೇಂದ್ರ ಸರ್ಕಾರ ವಿಶ್ವ ಬ್ಯಾಂಕ್‌ನಿಂದ ಧನ ಸಹಾಯವನ್ನು ಸಾಲದ ರೂಪದಲ್ಲಿ ಪಡೆದಿದ್ದರೂ ರಾಜ್ಯಕ್ಕೆ ಅದು ಲಭಿಸುವುದು ಅನುದಾನದ ರೂಪದಲ್ಲಿ. ಕೇಂದ್ರ ಮತ್ತು ರಾಜ್ಯ ಹಣಕಾಸು ಹಂಚಿಕೆ: ಒಟ್ಟು ಬಜೆಟ್ಟಿನಲ್ಲಿ ಶೇ 85ರಷ್ಟನ್ನು ಕೇಂದ್ರದ ಅನುದಾನ ಭರಿಸಿದರೆ, ಉಳಿದಶೇ 15 ರಷ್ಟನ್ನು ರಾಜ್ಯವು ಒದಗಿಸಲಿದೆ ಎಂದು ನಿರೀಕ್ಷಿಸಲಾಗಿದೆ. ಡಿಪಿಇಪಿಯ ಬಜೆಟ್‌ರಾಜ್ಯದ ಶಿಕ್ಷಣ ಬಜೆಟ್‌ನ ಒಂದು ಭಾಗವಲ್ಲ, ಮಾತ್ರವಲ್ಲದೆ, ಅದು ರಾಜ್ಯದ ಲೆಕ್ಕಪತ್ರ ಪರಿಶೋಧನೆಗೆ ಒಳಪಡುವುದಿಲ್ಲ (ಬಹುಶಃ ಅದು ಒಳಪಡುವುದು ಸಿಎಜಿ-CAG- Comptroller and Auditor General of India) ಗೆ. ನಿಜಾರ್ಥದಲ್ಲಿ, ರಾಜ್ಯವು ಡಿಪಿಇಪಿ ಅಡಿಯಲ್ಲಿ ತನ್ನ ಪ್ರಾಥಮಿಕ ಶಿಕ್ಷಣದ ವೆಚ್ಚವನ್ನು ಕನಿಷ್ಠ 1991-92ರ ಹಂತದವರೆಗಾದರೂ ನಿರ್ವಹಿಸುವ ಅಗತ್ಯವಿದೆ. ಪ್ರತಿ ಡಿಪಿಇಪಿ ಜಿಲ್ಲೆಯಿಂದ ರಾಜ್ಯದ ಬಜೆಟ್‌ಗೆ ಹೆಚ್ಚುವರಿಯಾಗಿ ಈ ಕಾರ್ಯಕ್ರಮವು ವರ್ಷಕ್ಕೆ ಸುಮಾರು 500ರಿಂದ 600 ಲಕ್ಷ ರೂಪಾಯಿ (ಅಂದರೆ ಏಳು ವರ್ಷಗಳ ಅವಧಿಯಲ್ಲಿ ಸುಮಾರು ರೂ.3500-4000 ಲಕ್ಷ) ಲಭ್ಯವಾಗುವಂತೆ ಮಾಡುತ್ತದೆ. ಪ್ರಸ್ತುತ ಹಂತದ ಜಿಲ್ಲಾವಾರು ವಾರ್ಷಿಕ ಸಾರ್ವಜನಿಕ ವೆಚ್ಚ ರೂ.6000 ಲಕ್ಷ ಆಗಿದ್ದು, ಇದು ವಾರ್ಷಿಕ ಸರಿ ಸುಮಾರು ಶೇ10ರಷ್ಟು ಹೆಚ್ಚುವರಿ ಮೊತ್ತವಾಗಿದೆ (ತಿಲಕ್2002).

ಡಿಪಿಇಪಿ ಮಾರ್ಗಸೂಚಿಗಳ ಪ್ರಕಾರ, ಇದು ಕೇವಲ ಆರ್ಥಿಕ ಉದ್ದೇಶಕ್ಕಾಗಿ ಪ್ರಾರಂಭವಾದ ಕಾರ್ಯಕ್ರಮವಲ್ಲ; ಬದಲಿಗೆ ಕಡಿಮೆ ವೆಚ್ಚದಲ್ಲಿ ಪರಿಣಾಮಕಾರಿಯಾದ, ಸುಸ್ಥಿರ ಹಾಗೂ ಅನುಕರಣೀಯ ಮಾದರಿಯಾಗಬಹುದಾದ ಒಂದು ವ್ಯವಸ್ಥೆಯ ನಿರ್ಮಾಣದ ಗುರಿ ಹೊಂದಿದೆ. ಕಟ್ಟಡ ನಿರ್ಮಾಣಗಳಂತಹ ಉದ್ದೇಶಕ್ಕೆ ಹಣ ವೆಚ್ಚ ಮಾಡದಂತೆ ನಿರ್ಬಂದಿಸುವ ಮೂಲಕ ವೆಚ್ಚಗಳ ಮೇಲೆ ಪರಿಮಿತಿ ವಿಧಿಸಿ ಅನುದಾನದ ರಕ್ಷಣೆ ಮಾಡುತ್ತದೆ. ವಿಶೇಷ ಗುಂಪುಗಳ ಮೇಲೆ ಗಮನ ಕೇಂದ್ರೀಕರಿಸುವುದು ಮತ್ತು ಕಲಿಕಾ ಬೋಧನಾ ಪ್ರಕ್ರಿಯೆಯ ಗುಣಮಟ್ಟವನ್ನು ಹೆಚ್ಚಿಸುವುದು ಕಾರ್ಯಕ್ರಮದ ಉದ್ದೇಶವಾಗಿದ್ದು, ಬಜೆಟ್‌ನ ಮುಖ್ಯ ಪಾಲು ಅವುಗಳನ್ನು ಈಡೇರಿಸುವುದಕ್ಕಾಗಿ ಬಳಕೆಯಾಗುತ್ತದೆ. ಕಾರ್ಯಕ್ರಮದ ಕೊನೆಯಲ್ಲಿ ಬರಬಹುದಾದ ಪುನರಾವರ್ತಿತ ವೆಚ್ಚಗಳು ರಾಜ್ಯ

ಸರ್ಕಾರದ ವಿಶೇಷ ಜವಾಬ್ದಾರಿಯಾಗಿದೆ ಎಂದು ಕಾರ್ಯಕ್ರಮದ ಕಡತಗಳು ಸ್ಪಷ್ಟಪಡಿಸುತ್ತವೆ [MHRD 1995:6].

ಕರ್ನಾಟಕದಲ್ಲಿ ಡಿಪಿಇಪಿ

1994ರ ಡಿಪಿಇಪಿ ಹಂತ- 1ರ ಭಾಗವಾಗಿದ್ದ ದೇಶದ ಏಳು ರಾಜ್ಯಗಳ ಪೈಕಿ ಕರ್ನಾಟಕವೂ ಒಂದಾಗಿತ್ತು. 1994ರಲ್ಲಿ ಕಾರ್ಯಕ್ರಮ ಪ್ರಾರಂಭವಾದಾಗ ಅದು ಕೋಲಾರ, ಮಂಡ್ಯ, ರಾಯಚೂರು ಮತ್ತು ಬೆಳಗಾವಿ ಸೇರಿ ರಾಜ್ಯದ ನಾಲ್ಕು ಜಿಲ್ಲೆಗಳನ್ನು ಒಳಗೊಂಡಿತ್ತು. ಹಂತ II ರಲ್ಲಿ 14 ಜಿಲ್ಲೆಗಳನ್ನು ಹೆಚ್ಚುವರಿಯಾಗಿ ಸೇರಿಸಲಾಯಿತು. 1994 ಮತ್ತು 2001ರ ನಡುವೆ ಹಂತ I ರ ಜಿಲ್ಲೆಗಳು ಕಾರ್ಯಕ್ರಮದ ಅವಧಿಯನ್ನು ಪೂರ್ಣಗೊಳಿಸಿದವು.

ರಾಜ್ಯದಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಲನ ನಡೆದ ಜಿಲ್ಲೆಗಳಲ್ಲಿ ಮೂಲ ಶಿಕ್ಷಣಕ್ಕಾಗಿ ಜಾಗೃತಿ ಮೂಡಿಸುವಲ್ಲಿ ಮತ್ತು ಶಿಕ್ಷಣದ ಬೇಡಿಕೆ ಸೃಷ್ಟಿಸುವಲ್ಲಿ ನೆರವಾಯಿತು. ನಂತರ, ಆಯಾ ರಾಜ್ಯದ ಜಿಲ್ಲೆಗಳಲ್ಲಿ ಮತ್ತೆ ಹೊಸದಾಗಿ ಪ್ರಾಥಮಿಕ ಶಿಕ್ಷಣದೆಡೆಗೆ ಆಸಕ್ತಿ ಮೂಡುವಂತೆ ಮಾಡಲು ಮತ್ತು ಬೆಂಬಲವನ್ನು ಪಡೆದುಕೊಳ್ಳಲು ಡಿಪಿಇಪಿಗೆ ಸಾಧ್ಯವಾಯಿತು. ಡಿಪಿಇಪಿಗಿಂತ ಮೊದಲು ಕರ್ನಾಟಕದಲ್ಲಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಅಗತ್ಯವನ್ನು ಪೂರೈಸಲು ಲಭ್ಯವಿರುವ ನಿಧಿಯು ಬಹಳ ಸೀಮಿತವಾಗಿರುವುದನ್ನು ಡಿಪಿಇಪಿ ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳು ಗಮನಿಸಿದರು. ಶಾಲಾ ಕಟ್ಟಡಗಳ ನಿರ್ಮಾಣ ಕಾರ್ಯ ಮತ್ತು ಶಿಕ್ಷಕರ ನೇಮಕಾತಿ ಸ್ಥಗಿತಗೊಂಡಿದ್ದು, ಅವಕಾಶವಂಚಿತ ವರ್ಗಗಳಿಗೆ ಕೊಡಮಾಡುತ್ತಿದ್ದ ಪ್ರೋತ್ಸಾಹಕಗಳು ಕೂಡ ನಿಯಮಿತವಾಗಿರಲಿಲ್ಲ. ಪ್ರಾಥಮಿಕ ಶಿಕ್ಷಣದ ಆಡಳಿತ ಮತ್ತು ನಿರ್ವಹಣೆಯಲ್ಲಿ ಒಂದು ದಶಕದ ಸುದೀರ್ಘ ಕುಸಿತದ ನಂತರ, ಡಿಪಿಇಪಿ ಎಲ್ಲಾ ಜನವಸತಿ ಪ್ರದೇಶಗಳಲ್ಲಿ ಶಾಲಾ ಪ್ರವೇಶ ಮತ್ತು ದಾಖಲಾತಿಗೆ ಉತ್ತೇಜನವನ್ನು ಒದಗಿಸಿದೆ ಎಂಬುದನ್ನು ವ್ಯಾಪಕವಾಗಿ ಕಂಡುಕೊಳ್ಳಲಾಗಿದೆ ಮತ್ತು ಪ್ರತಿಕೂಲ ಪರಿಸ್ಥಿತಿಯಲ್ಲಿ ಬದುಕುತ್ತಿರುವ ಸಮುದಾಯಗಳ ಹೆಚ್ಚಿನ ಭಾಗವಹಿಸುವಿಕೆಯನ್ನು ಇದು ಸಕ್ರಿಯಗೊಳಿಸಿದೆ. ಡಿಪಿಇಪಿ ಹಂತ- Iರ ರಾಜ್ಯಗಳಲ್ಲಿ ಗಮನಿಸಲಾದ ಮಾದರಿಗಳನ್ನು ಅನುಸರಿಸಿ ಕರ್ನಾಟಕದಲ್ಲಿಯೂ ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿಯಲ್ಲಿ ಆಸಕ್ತಿ ತೀವ್ರಗೊಂಡಿತು. ಹೊಸ ಪಠ್ಯಕ್ರಮಗಳ ಪರಿಚಯದ ಮೂಲಕ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಲಾಯಿತು (ಸ್ಥಳೀಯ ಕಥೆಗಳು ಮತ್ತು ಸ್ಥಳೀಯ ವ್ಯಕ್ತಿಗಳ ಸಂಪನ್ಮೂಲವನ್ನು ಬಳಸಿಕೊಂಡು ಪಠ್ಯಪುಸ್ತಕಗಳನ್ನು ಪ್ರೋತ್ಸಾಹಿಸುವುದು ಸೇರಿದಂತೆ) ಮತ್ತು ಕಲಿಕಾ ಬೋಧನಾ ವಿಧಾನಗಳನ್ನು ನವೀಕರಿಸಲಾಯಿತು. ಶಾಲೆಗಳ ಶೈಕ್ಷಣಿಕ ಬೆಂಬಲಕ್ಕಾಗಿ ಬ್ಲಾಕ್‌ಮತ್ತು ಸಮೂಹ ಸಂಪನ್ಮೂಲ ಕೇಂದ್ರಗಳ ರೂಪದಲ್ಲಿ ಸಾಂಸ್ಥಿಕ ಜಾಲವನ್ನು ರಚಿಸಲಾಯಿತು.

II
ಕಾರ್ಯಕ್ರಮದ ಮೌಲ್ಯಮಾಪನ

ಮೊದಲೇ ತಿಳಿಸಿರುವ ಹಾಗೆ ಸಾಲ ನಿಧಿಯನ್ನು ಪಡೆದಿರುವ ಸರ್ಕಾರಿ ಚಟುವಟಿಕೆಗಳ ಪರಿಣಾಮಗಳನ್ನು ಅಧ್ಯಯನ ಮಾಡಲು ನಾವು ಆ ಕಾರ್ಯಕ್ರಮವನ್ನು ಎರಡು ಹಂತಗಳಲ್ಲಿ ಮೌಲ್ಯಮಾಪನ ಮಾಡುವ ಅಗತ್ಯವಿದೆ. ಮೊದಲನೆಯದಾಗಿ, ಹಣವನ್ನು ಪರಿಣಾಮಕಾರಿಯಾಗಿ ವೆಚ್ಚ ಮಾಡಲಾಗಿದೆಯೇ?, ಅಂದರೆ, ನಿಗದಿಪಡಿಸಲಾಗಿರುವ ಉದ್ದೇಶಗಳು ಈಡೇರಿವೆಯೇ? ಮತ್ತು ಯೋಜನಾ ಅವಧಿ ಕೊನೆಗೊಂಡ ನಂತರವೂ ದೀರ್ಘ ಕಾಲದವರೆಗೆ ಇವೆಲ್ಲ ಪ್ರಯತ್ನಗಳು ಸುಸ್ಥಿರವಾಗಿ ಉಳಿದುಕೊಂಡಿರುತ್ತವೆಯೇ ಎಂಬುದನ್ನು ಪರಿಶೋಧನೆ ನಡೆಸುವ ಅಗತ್ಯವಿದೆ. ಪ್ರಾಥಮಿಕ ಶಿಕ್ಷಣವು ಉನ್ನತ ಶಿಕ್ಷಣಕ್ಕಿಂತ ಭಿನ್ನವಾಗಿದ್ದು, ಇಲ್ಲಿ ಹಣದ ರೂಪದಲ್ಲಿ ಪ್ರತಿಫಲ ನಿರೀಕ್ಷಿಸಲಾಗುವುದಿಲ್ಲ ಎನ್ನುವುದು ಸಾಮಾನ್ಯ

ಗ್ರಹಿಕೆಯಾಗಿರುವುದರಿಂದ ನಾವು ಸಾಲ ಮರುಪಾವತಿಯ ವಿಚಾರವನ್ನು ಕೈಗೆತ್ತಿಕೊಂಡಿಲ್ಲ. ಎರಡನೆಯದಾಗಿ, ವ್ಯವಸ್ಥೆಯ ಮೇಲೆ ಅದು ಬೀರುವ ಪ್ರಭಾವದ ಪರಿಶೀಲನೆ: ಈ ಪ್ರಕರಣದಲ್ಲಿ ಶಿಕ್ಷಣ ಕ್ಷೇತ್ರದೊಳಗಿನ ವ್ಯವಸ್ಥೆಯಿಂದ ಪ್ರಾರಂಭಿಸಿ, ಅಲ್ಲಿನ ಆಡಳಿತ ಮತ್ತು ನಿರ್ಧಾರ ಕೈಗೊಳ್ಳುವಿಕೆ ಇತ್ಯಾದಿ ವಿಷಯಗಳತ್ತ ನೋಡಬೇಕಾಗುತ್ತದೆ. ವಿಶ್ವ ಬ್ಯಾಂಕ್‌ನಂತಹ ಸಾಲದಾತರ ಸಂದರ್ಭದಲ್ಲಿ ನಿಧಿ ಹಂಚಿಕೆ ಮಾಡುವ ಸಂಸ್ಥೆಗಳು ಬೀರಲಿರುವ ಪ್ರಭಾವವೇನು, ಅದರಲ್ಲೂ ವಿಶೇಷವಾಗಿ ಸಮಾಜ ಕಲ್ಯಾಣ ನೀತಿಯ ಮೇಲೆ ಅವುಗಳ ಪ್ರಭಾವ, ಏನು ಎಂಬ ಅಂಶಗಳನ್ನು ಪರಿಶೀಲಿಸುವ ಅಗತ್ಯವಿದೆ.

ಈ ವಿಭಾಗದಲ್ಲಿ ನಾವು ಕರ್ನಾಟಕದಲ್ಲಿ ಡಿಪಿಇಪಿ ಹಂತ-Iರ ಕಾರ್ಯಕ್ರಮವನ್ನು ಗಮನಿಸಿದ್ದೇವೆ. ಕಾರ್ಯಕ್ರಮದ ಉದ್ದೇಶಗಳನ್ನು ಎಷ್ಟರಮಟ್ಟಿಗೆ ಸಾಧಿಸಲಾಗಿದೆ ಹಾಗೂ ಕಾರ್ಯಕ್ರಮ ಕುರಿತ ಹೇಳಿಕೆಗಳು ಸಮರ್ಥನೀಯವಾಗಿಯೇ ಎಂಬುದನ್ನು ಮೌಲ್ಯಮಾಪನ ಮಾಡಲು ನಾವು ಇಲ್ಲಿ ಪ್ರಯತ್ನಿಸಿದ್ದೇವೆ. ಮಧ್ಯಪ್ರವೇಶಿಕೆಗೆ ಸಂಬಂಧಿಸಿದಂತೆ ಸೂಚಿಸಿರುವ ಮಾನದಂಡಗಳ ಆಧಾರದಲ್ಲಿ ಪರಿಶೀಲನೆ ನಡೆಸಲಿರುವ ಅಂಶಗಳು ಹೀಗಿವೆ: (i) ಕಾರ್ಯಕ್ರಮದ ಖರ್ಚುವೆಚ್ಚ, (ii) ಶಿಕ್ಷಣ ನಿರ್ವಹಣಾ ಮಾಹಿತಿ ವ್ಯವಸ್ಥೆ(EMIS – Education Management Information System)ಯ ಗುಣಮಟ್ಟ, (iii) ಯೋಜನೆಯ ವಿಕೇಂದ್ರೀಕರಣವನ್ನು ಎಷ್ಟರಮಟ್ಟಿಗೆ ಸಾಧಿಸಲಾಗಿದೆ, (iv) ವಿದ್ಯಾರ್ಥಿಗಳ ಶಾಲಾ ಪ್ರವೇಶ ಮತ್ತು ದಾಖಲಾತಿ ಹಾಗೂ ಶಾಲೆಯಲ್ಲಿ ಅವರು ಮುಂದುವರಿಯುವಂತೆ ಮಾಡುವಲ್ಲಿನ ಪ್ರಗತಿ, (v) ಶಿಕ್ಷಣದ ಗುಣಮಟ್ಟ: ಕಲಿಕಾ ಬೋಧನಾ ವಿಧಾನಗಳ ನವೀಕರಣ ಮತ್ತು ಕಲಿಕಾರ್ಥಿಗಳ ಸಾಧನೆ.

ಪಟ್ಟಿ 1: ಕರ್ನಾಟಕದಲ್ಲಿ ಡಿಪಿಇಪಿ ಸಂಕ್ಷಿಪ್ತ ನೋಟ

	ಜಿಲ್ಲೆ	**ಯೋಜನಾ ಅವಧಿ**	**ಮೀಸಲು (ಕೋಟಿಗಳಲ್ಲಿ)**	**ಖರ್ಚು (ಅಕ್ಟೋಬರ್2001)**
ಡಿಪಿಇಪಿ I	4 (ಈಗ 5)	1994 ರಿಂದ 2001	134.98 (ಪರಿಷ್ಕೃತ 214.80?)	169.9
ಡಿಪಿಇಪಿ II	7	1997 ರಿಂದ 2004ರವರೆಗೆ	243.71	211.53

ಮೂಲ: ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ

ಖರ್ಚು ವೆಚ್ಚಗಳು

ಕಾರ್ಯಕ್ರಮದ ಲೆಕ್ಕಪತ್ರ ಪರಿಶೋಧನೆ ನಡೆಸಲಾಗಿದೆ ಮತ್ತು ಅವುಗಳನ್ನು ಅನುಕ್ರಮವಾಗಿ ವಾರ್ಷಿಕ ವರದಿಗಳಲ್ಲಿ ಸಲ್ಲಿಸಲಾಗಿದೆ [ಡಿಪಿಇಪಿ ಕರ್ನಾಟಕ 1995, 1996, 1997, 1998, 1999, 2000]. ಕಾರ್ಯಕ್ರಮದ ಆರ್ಥಿಕ ಕ್ರಮಬದ್ಧತೆ ಮತ್ತು ನಿಯಮಗಳನ್ನು ಮೌಲ್ಯಮಾಪನ ಮಾಡಲು ವಾರ್ಷಿಕ ಲೆಕ್ಕಪತ್ರದಲ್ಲಿ ಬಳಸಲಾಗಿರುವ ಚಾಲ್ತಿಖಾತೆಗಳು ತೃಪ್ತಿಕರವಾಗಿಲ್ಲ. ನಿರ್ಮಾಣ, ನಿರ್ವಹಣೆ ಮತ್ತು ಮಧ್ಯಪ್ರವೇಶಿಕೆಯ ವಿಭಾಗದಲ್ಲಿ ಉಳಿದಿರುವವುಗಳನ್ನು ಒಳಗೊಂಡಂತೆ ಪ್ರತಿಯೊಂದು ವೆಚ್ಚವನ್ನು ನಾವು ಅರ್ಥಮಾಡಿಕೊಂಡಿರುವುದಕ್ಕೆ ಅನುಗುಣವಾಗಿ ವಿವಿಧ ರೀತಿಯ ಪ್ರತ್ಯೇಕ ಗುಂಪುಗಳಾಗಿ, ಅಥವಾ ವರ್ಗೀಕರಣದ ಪ್ರಕಾರ ಮರು ಜೋಡಿಸುವುದು ಅಗತ್ಯವೆಂದು ಕಂಡುಕೊಂಡಿದ್ದೇವೆ. ಈ ಮರು ಜೋಡಣೆಯು ವಿವಿಧ ವೆಚ್ಚಗಳ ಸ್ವರೂಪವನ್ನು ಮೌಲ್ಯಮಾಪನ ಮಾಡಲು ಸಹ ನಮಗೆ ಅವಕಾಶಮಾಡಿಕೊಡುತ್ತದೆ.

ಮೇಲಿನ ಪಟ್ಟಿ 2ರ ಆಧಾರದಲ್ಲಿ, ನಿಗದಿತ ಮಿತಿಗಳಿಗೆ ಹೋಲಿಸಿದರೆ, ಆಡಳಿತಾತ್ಮಕ ವೆಚ್ಚಗಳು ಶೇ.7.7ರಷ್ಟಿದ್ದು, ಇದು ವಾಡಿಕೆಯ ಶೇ.6 ಕ್ಕಿಂತ ಸ್ವಲ್ಪ ಹೆಚ್ಚಾಗಿದೆ. (ರಾಜ್ಯ ಕಾರ್ಯಕ್ರಮ ನಿರ್ದೇಶಕರ ವೇತನವನ್ನು ನಿರ್ವಹಣಾ ವೆಚ್ಚದ ಭಾಗವಾಗಿ ಸೇರಿಸಲಾಗಿದೆ). ಸಿವಿಲ್‌ಕಾಮಗಾರಿಗಳ ವೆಚ್ಚ ಮಾತ್ರ ಶೇ.17 ಇದ್ದು ಇದು ವಾಡಿಕೆಯ ಶೇ.24ಕ್ಕಿಂತ ಕಡಿಮೆ ಇದೆ. ಮೂಲಧನವನ್ನು ಹೆಚ್ಚಿನಂಶ ಯೋಜನಾ ನಿರ್ವಹಣಾ ವೆಚ್ಚದ ಭಾಗವಾಗಿ ಸೇರಿಸಬೇಕು, ಹಾಗಾದಾಗ ಅದರ ಪಾಲು ಪ್ರತಿಶತ 14.3 ರಷ್ಟು ಹೆಚ್ಚಾಗುತ್ತದೆ, ಆಗ ಅದು ನಿಗದಿತ ಮಿತಿಯನ್ನು ಮೀರಿರುತ್ತದೆ.

ಕಾರ್ಯಕ್ರಮದ ಉದ್ದೇಶಗಳಾದ ಕಲಿಕಾ ಮಟ್ಟದಲ್ಲಿ ಸುಧಾರಣೆ ಮತ್ತು ಶಾಲೆಗೆ ದಾಖಲಾದ ಮಕ್ಕಳು ಶಾಲೆಯಲ್ಲಿ ಮುಂದುವರಿಯುವುದರಲ್ಲಿ ಸುಧಾರಣೆ ಇವುಗಳಿಗೆ ಪೂರಾಕವಾಗಿ ಬ್ಲಾಕ್‌ಸಂಪನ್ಮೂಲ ಕೇಂದ್ರ(ಬಿಆರ್ಸಿ) ಮತ್ತು ಸಮೂಹ ಸಂಪನ್ಮೂಲ ಕೇಂದ್ರ-ಸಿಆರ್ಸಿ (BRC-CRC)ಗಳ ವೇತನ, ಪಠ್ಯಪುಸ್ತಕಗಳು, ಶಿಕ್ಷಕರ ತರಬೇತಿ ಮತ್ತು ಶಾಲಾ ಅನುದಾನಗಳು ಇವುಗಳನ್ನು ಒಟ್ಟುಗೂಡಿಸಿ ಒಂದು ಗುಂಪಿನಡಿಯಲ್ಲಿ ತರಲಾಗಿದೆ. ಇದು ಕಾರ್ಯಕ್ರಮದ ವೆಚ್ಚದ ಸುಮಾರು 44 ಪ್ರತಿಶತವಾಗಿದೆ. ಶಾಲಾ ದಾಖಲಾತಿಯನ್ನು ಹೆಚ್ಚಿಸುವ ಕಾರ್ಯಕ್ರಮದ ಗುರಿ ಸಾಧಿಸಲು ಡಿಪಿಇಪಿ ಶಿಕ್ಷಕರ ವೇತನವನ್ನು **ಪಿಪಿಸಿ (PPC)** ಯೊಂದಿಗೆ ಸೇರಿಸಲಾಗಿದೆ. ಇದು ವೆಚ್ಚದ ಸುಮಾರು 35 ಪ್ರತಿಶತದಷ್ಟು ಮೊತ್ತವಾಗಿದ್ದು, ಇವಿಷ್ಟೂ ವೇತನ ರೂಪದಲ್ಲೇ ಇದೆ (ಎಸ್‌ಪಿ ಓ ವೇತನವೂ ಸೇರಿದಂತೆ ಒಟ್ಟು ವೇತನಗಳು ರೂ.62,67,99,478ರಷ್ಟಿದ್ದು, ಒಟ್ಟು ವೆಚ್ಚದ 46 ಪ್ರತಿಶತದಷ್ಟು ಇದೆ).

ಏಳು ವರ್ಷಗಳ ಅವಧಿಯ (1994-2001) ಒಟ್ಟು ವೆಚ್ಚ ಮತ್ತು ಶಾಲಾ ದಾಖಲಾತಿ ದತ್ತಾಂಶದ ಆಧಾರದ ಮೇಲೆ, ಪ್ರತಿ ಮಗುವಿಗೆ ವಾರ್ಷಿಕ ಹೆಚ್ಚುವರಿ ವೆಚ್ಚವನ್ನು ಲೆಕ್ಕ ಹಾಕಲಾಗಿದ್ದು ಅದು ಪ್ರತಿ ಮಗುವಿಗೆ ಡಿಪಿಇಪಿ – Iರಲ್ಲಿ ಸುಮಾರು ರೂ.169.00 ರಷ್ಟು ಇರುವುದು ಕಂಡುಬಂದಿದೆ (1994-2001ರವರೆಗಿನ ಒಟ್ಟು ವೆಚ್ಚವನ್ನು ಇದೇ ಅವಧಿಯಲ್ಲಿ ಶಾಲೆಗಳಲ್ಲಿ ದಾಖಲಾದ ಮಕ್ಕಳ ಒಟ್ಟು ಸಂಖ್ಯೆಯಿಂದ ಭಾಗಿಸಲಾಗಿದೆ). ಪ್ರತಿ ಮಗುವಿಗೆ ರೂ.1350 ರಂತೆ ಇರುವ ಪ್ರಸ್ತುತ ವೆಚ್ಚಕ್ಕೆ ಹೋಲಿಸಿದರೆ ಇದು ಸುಮಾರು 12 ಪ್ರತಿಶತದಷ್ಟು ಹೆಚ್ಚಳವಾಗಿದೆ. ಈ ಅಂಕಿಅಂಶಗಳ ಹೊರತಾಗಿಯೂ ಪ್ರತಿ ಮಗುವಿನ ಮೇಲೆ ಖರ್ಚು ಮಾಡಲಾಗಿರುವ ಹೆಚ್ಚುವರಿ ಹಣದ ಅಂದಾಜು ವೆಚ್ಚವನ್ನು ಲೆಕ್ಕ ಹಾಕಲು ಸಾಧ್ಯವಾಗಲಿಲ್ಲ. ಉದಾಹರಣೆಗೆ, ಉನ್ನತ ಕಲಿಕೆಯ ಸಾಧನೆಗಾಗಿ ಕಲಿಕಾ ಬೋಧನೆಯ ಪರಿಕರಗಳನ್ನು ನೀಡಿರುವುದು ಅಥವಾ ಶಾಲಾ ದಾಖಲಾತಿ ಹೆಚ್ಚಳಕ್ಕಾಗಿ ಮಾಡಿರುವ ಚಟುವಟಿಕೆಗಳಂತಹ *ನಿರ್ದಿಷ್ಟ ಯೋಜನಾ ಚಟುವಟಿಕೆಗಳಿಗಾಗಿ* ಮಾಡಿರುವ ವೆಚ್ಚ ಮುಂತಾದವನ್ನು ಲೆಕ್ಕ ಹಾಕಲು ಆಗಿಲ್ಲ. ಕಾರಣವೇನೆಂದರೆ, ಸಮರ್ಪಕ ಅವಧಿಗಳಿಗೆ ತಕ್ಕ ಹಾಗೆ ದತ್ತಾಂಶಗಳನ್ನು ಪ್ರಸ್ತುತಪಡಿಸಲಾಗಿಲ್ಲ.

ಕಾರ್ಯಕ್ರಮದಲ್ಲಿ ಹಲವು ಸ್ವಯಂಸೇವಾ ಸಂಸ್ಥೆಗಳು ಹಾಗೂ ಸಲಹೆಗಾರರು ತೊಡಗಿಸಿಕೊಂಡಿರುವುದು ತಿಳಿದಿದ್ದರೂ ಸಂಬಂಧಿಸಿದ ವೆಚ್ಚಗಳನ್ನು ಖರ್ಚುವೆಚ್ಚದ ಲೆಕ್ಕಪತ್ರದಲ್ಲಿ ಎಲ್ಲೂ ಸೂಚಿಸಲಾಗಿಲ್ಲ. (ಯೋಜನೆಯಲ್ಲಿ ತೊಡಗಿಸಿಕೊಂಡಿದ್ದ ಈ ಸ್ವಯಂ ಸೇವಾ ಸಂಸ್ಥೆಗಳು ಮತ್ತು ಸಲಹಾ ಸಂಸ್ಥೆಗಳು ಯಾವುವು ಎಂಬುದನ್ನು ವಾರ್ಷಿಕ ವರದಿಗಳ ನಿರೂಪಣಾ ವಿಭಾಗವು ಸೂಚಿಸುವುದಿಲ್ಲ.)

ಡಿಪಿಇಪಿಗಾಗಿ ರಾಜ್ಯದಿಂದ ಬರಬೇಕಾಗಿರುವ ಹಣಕಾಸು ಶೇ.15 ರಷ್ಟಿದ್ದು, ಡಿಪಿಇಪಿಯ ವಾರ್ಷಿಕ ವರದಿಗಳು ರಾಜ್ಯದ ಪ್ರತಿ ಸಾಲಿನ ಈ ಕೊಡುಗೆಯ ಮಾಹಿತಿಯನ್ನು ಕೂಡ ಒದಗಿಸುತ್ತದೆ. ಆದರೆ ರಾಜ್ಯ ಶಿಕ್ಷಣದ ಆಯವ್ಯಯ ಪತ್ರದಲ್ಲಿ [ಕರ್ನಾಟಕ ಸರ್ಕಾರ 2002] ಈ ಹಂಚಿಕೆಯ ಕುರಿತು ಯಾವುದೇ ಪುರಾವೆಗಳಿಲ್ಲ. ಈ ಯೋಜನೆಯು ಸ್ವತ: ಬಿಆರ್ಸಿ ಮತ್ತು ಸಿಆರ್ಸಿಗಳ ಶಿಕ್ಷಕರು ಹಾಗೂ ಡಿಪಿಇಪಿ ವಿಶೇಷ ಶಿಕ್ಷಕರಿಗೆ ಸಂಬಳದ ರೂಪದಲ್ಲಿ ನೀಡಬೇಕಾಗಿರುವ ಮೊತ್ತದ ಆವರ್ತನ ಹೊಣೆಗಾರಿಕೆಯನ್ನು ಸೃಷ್ಟಿಸುತ್ತದೆ. ವಾರ್ಷಿಕ ಶಾಲಾ ಅನುದಾನ ಮತ್ತು ಶಿಕ್ಷಕರ ಅನುದಾನಗಳಂತಹ ಸಂಭಾವ್ಯ ವೆಚ್ಚಗಳ

ಮೊತ್ತದ ವಿತರಣೆಯು ಅನಿಯಮಿತವಾಗಿರುವುದನ್ನು ವಾರ್ಷಿಕ ಲೆಕ್ಕಪತ್ರಗಳು ತೋರಿಸುತ್ತವೆ ಮತ್ತು ಅವುಗಳನ್ನು ಮುಂದುವರಿಸದೆ ಇರುವ ಲಕ್ಷಣಗಳು ಕಂಡುಬರುತ್ತವೆ. ನಾವು ತಿಳಿದುಕೊಂಡಂತೆ, ಡಿಪಿಇಪಿ-Iರ ಸುಸ್ಥಿರತೆ ಕುರಿತ ವರದಿ ಯೊಂದನ್ನು 2001ರಲ್ಲಿ ಸಿದ್ಧಪಡಿಸಲಾಗಿದೆ ಆದರೆ ಅದನ್ನು ಈವರೆಗೆ ಚರ್ಚೆಗಾಗಿ ಕೈಗೆತ್ತಿಕೊಳ್ಳಲಾಗಿಲ್ಲ ಮಾತ್ರವಲ್ಲದೆ ಅದೊಂದು ಸಾರ್ವಜನಿಕ ದಾಖಲೆ ಕೂಡ ಅಲ್ಲ. ಡಿಪಿಇಪಿಯ ಸಂರಚನೆಗಳು ರಾಜ್ಯದಾದ್ಯಂತ ಒಂದು ಮಾದರಿಯಾಗಿ ಪ್ರಮಾಣೀಕರಿಸಲ್ಪಟ್ಟು ರೂಪುಗೊಂಡ ಸನ್ನಿವೇಶದಲ್ಲಿ ಹೆಚ್ಚುವರಿ ಹಣಕಾಸಿನ ಹೊಣೆಗಾರಿಕೆಗಳನ್ನು ಹೇಗೆ ನಿಭಾಯಿಸಲಾಗುತ್ತಿದೆ ಎಂಬುದರ ಸ್ಪಷ್ಟತೆಯಿಲ್ಲ. 2002-03ರ ಶಿಕ್ಷಣ ಆಯವ್ಯಯ ಪತ್ರದ ನಿಕಟ ಪರಿಶೀಲನೆಯಿಂದ ಕಂಡುಬಂದ ಅಂಶವೆಂದರೆ, ಹೊಸ ಹೆಚ್ಚುವರಿ ವೆಚ್ಚಗಳನ್ನು ಯಾವ ವಿಭಾಗಗಳ ಅಡಿಯಲ್ಲಿ ಮೀಸಲಿರಿಸಲಾಗಿದೆ ಎಂದು ಅದು ಸೂಚಿಸುವುದಿಲ್ಲ [ಕರ್ನಾಟಕ ಸರ್ಕಾರ 2002].

ಶಿಕ್ಷಣ ನಿರ್ವಹಣಾ ಮಾಹಿತಿ ವ್ಯವಸ್ಥೆ
(EMIS – Education Management Information System)
ಮತ್ತು ದತ್ತಾಂಶಗಳ ವಿಶ್ವಾಸಾರ್ಹತೆ

ಡಿಪಿಇಪಿ ಜಿಲ್ಲೆಗಳ ಶಾಲೆಗಳು ಮತ್ತು ಶಾಲಾ ಪ್ರವೇಶ ಹಾಗೂ ದಾಖಲಾತಿಗೆ ಸಂಬಂಧಿಸಿದ ದತ್ತಾಂಶಗಳ ಲಭ್ಯತೆ ಮತ್ತು ಅವುಗಳನ್ನು ಸಂಘಟಿಸಿರುವ ರೀತಿ ಮೆಚ್ಚುವಂತಹುದು ಎಂಬುದನ್ನು ಕ್ಷೇತ್ರ ಸಂಶೋಧಕರು ಗಮನಿಸಿದ್ದಾರೆ. ಜಿಲ್ಲಾ ಮತ್ತು ಬ್ಲಾಕ್‌ಕಚೇರಿಗಳು ತಮ್ಮ EMISನ್ನು ನವೀಕರಿಸಲು ದತ್ತಾಂಶವನ್ನು ಸಂಘಟಿಸಿ ಗಣಕೀಕರಣಗೊಳಿಸುತ್ತವೆ. ಮಾತ್ರವಲ್ಲದೆ ನಿಯಮಿತವಾದ ಸಮೀಕ್ಷೆಗಳನ್ನು ಕೈಗೊಂಡಿವೆ ಮತ್ತು ಶಾಲಾ ಆಧರಿತ ದತ್ತಾಂಶಗಳನ್ನು ಸಂಗ್ರಹಿಸಿವೆ. ಆದಾಗ್ಯೂ, ಜಿಲ್ಲಾ ಮಟ್ಟದ EMIS ನಲ್ಲಿ ವರದಿಯಾಗಿರುವ ಅಂಕಿಅಂಶಗಳು ವಿಶ್ವಾಸಾರ್ಹತೆಯಿಂದ ಕೂಡಿಲ್ಲ ಎನ್ನುವ ಅಭಿಪ್ರಾಯ ವ್ಯಾಪಕವಾಗಿದೆ. ಶಾಲಾ ದಾಖಲಾತಿ ಮತ್ತು ಹಾಜರಾತಿಗೆ ಸಂಬಂಧಿಸಿದ ದತ್ತಾಂಶಗಳನ್ನು ಸಾಮಾನ್ಯವಾಗಿ ನೈಜ ದತ್ತಾಂಶಕ್ಕಿಂತ ಉತ್ಪ್ರೇಕ್ಷಿಸಿ ತೋರಿಸಲಾಗಿರುತ್ತದೆ.[4] ವಿದ್ಯಾರ್ಥಿಗಳ ದಾಖಲಾತಿಯನ್ನು ಹೆಚ್ಚಿಸುವ ಜವಾಬ್ದಾರಿಯನ್ನು ಶಿಕ್ಷಕರ ಮೇಲೆ ಹೇರಿರುವುದರಿಂದಾಗಿ ವ್ಯಾಪಕವಾಗಿ ವಿದ್ಯಾರ್ಥಿಗಳ ಹಾಜರಾತಿಯನ್ನು ಹೆಚ್ಚು ತೋರಿಸುವುದು ಕಂಡುಬರುತ್ತಿರಬಹುದು. ಇಂತಹ ಪ್ರವೃತ್ತಿಗೂ ಶಾಲೆಯಿಂದ ಹೊರಗುಳಿದ ಮಕ್ಕಳ ಪ್ರಮಾಣವು ಪ್ರಸ್ತುತ ವ್ಯಾಪಕವಾಗಿ ಕಡಿಮೆ ಸಂಖ್ಯೆಯಲ್ಲಿ ವರದಿಯಾಗುತ್ತಿರುವುದಕ್ಕೂ ಸಂಬಂಧವಿದೆ. ಮೊದಲೇ ಹೇಳಿರುವಂತೆ, ಡಿಪಿಇಪಿಯ ಸಾರ್ವಜನಿಕ ದಾಖಲೆಗಳಲ್ಲಿ ಪ್ರಸ್ತುತಪಡಿಸಲಾಗಿರುವ ದತ್ತಾಂಶ ಡಿಪಿಇಪಿಗೂ ಮುನ್ನ ಮತ್ತು ಡಿಪಿಇಪಿ ವಿವಿಧ ಹಂತಗಳ ನಡುವೆ ಮಾತ್ರವಲ್ಲದೆ, ಡಿಪಿಇಪಿ ಇಲ್ಲದ ಮತ್ತು ಡಿಪಿಇಪಿ ಇರುವ ಜಿಲ್ಲೆಗಳ ನಡುವಿನ ಯಾವುದೇ ವ್ಯವಸ್ಥಿತ ಹೋಲಿಕೆಗಳಿಗೆ ಅವಕಾಶ ನೀಡುವುದೇ ಇಲ್ಲ. ಪರಿಶೀಲನೆ ನಡೆಸಲು ಸಂಶೋಧಕರಿಗೆ ದತ್ತಾಂಶ ಕೈಗೆ ಸಿಗುವುದು ಕೂಡ ಸುಲಭಸಾಧ್ಯವಲ್ಲ. ವರದಿಯಾಗಿರುವ ವಿವಿಧ ಅಂಕಿಅಂಶಗಳಲ್ಲಿ, 'ಹಿರಿಯ ಪ್ರಾಥಮಿಕ' (ತರಗತಿ I ರಿಂದ VII) ಮತ್ತು 'ಕಿರಿಯ ಪ್ರಾಥಮಿಕ' (ತರಗತಿ I ರಿಂದ IV) ವಿಭಾಗಗಳ ಸಂಚಿತ ದತ್ತಾಂಶವನ್ನು ಕರ್ನಾಟಕದ ಮತ್ತು ಅಥವಾ ಡಿಪಿಇಪಿಗೆ ಸಂಬಂಧಿಸಿದ ಯಶಸ್ಸಿನ ವಿವಿಧ ಅಂಶಗಳಿಗೆ ಸೂಚಕಗಳಾಗಿ ಬೇರೆ ಬೇರೆ ರೀತಿಯಲ್ಲಿ ಬಳಸಿಕೊಳ್ಳಬಹುದಾಗಿದೆ. ಹಲವು ವರದಿಗಳ ನಡುವೆ ವ್ಯವಸ್ಥಿತ ಹೋಲಿಕೆ ಮತ್ತು ದತ್ತಾಂಶ ಬಳಕೆಯನ್ನು ಇದು ಕ್ಲಿಷ್ಟಗೊಳಿಸಿದೆ. .

ಪಟ್ಟಿ 2: ಕರ್ನಾಟಕ ಡಿಪಿಇಪಿ ಹಂತ 1ರ ಹಣಕಾಸು ಖರ್ಚುವೆಚ್ಚದ ಲೆಕ್ಕಪತ್ರ

	ಖಾತೆ	**ಒಟ್ಟು(1994-2001)(ರೂ.ಗಳಲ್ಲಿ)**	**ಶೇಕಡಾವಾರು ಒಟ್ಟು ಖರ್ಚು**	**ಡಿಪಿಇಪಿ ಮಾರ್ಗಸೂಚಿಗಳ ಪ್ರಕಾರ ಒಟ್ಟು ಖರ್ಚಿನ**

				ನಿಗದಿತ ಮಿತಿ (ಶೇಕಡಾವಾರು) (ಮಾ.ಸಂ.ಅ.ಇ.1995)
ಕಾಮಗಾರಿ	ಕಾಮಗಾರಿ	23,22,94,605	17	24
ಆಡಳಿತ	ಆಡಳಿತ	3,36,69,828	7.7	6
	ವೇತನ:ರಾಜ್ಯ ಯೋಜನಾ ನಿರ್ದೇಶಕರು	7,14,82,641		
ಮೂಲಧನ ಕಾರ್ಯಕ್ರಮ	ಮೂಲಧನ	8,86,37,116	6.5	
	ಶಿಕ್ಷಕರ ತರಬೇತಿ	17,96,56,465 ಕಾರ್ಯಕ್ರಮದ ಶೇ.30	13	
	ಶಿಕ್ಷಕರ/ಶಾಲೆಯ ಅನುದಾನ	12,79,44,008 ಕಾರ್ಯಕ್ರಮದ ಶೇ.21		
	ವೇತನ (ಬಿಆರ್‌ಸಿ/ಸಿಆರ್‌ಸಿ)	21,33,80,527 ಕಾರ್ಯಕ್ರಮದ ಶೇ.36	9.5	
	ಪಠ್ಯ ಪುಸ್ತಕಗಳು	6,78,08,295 ಕಾರ್ಯಕ್ರಮದ ಶೇ.11.5	5	
ದಾಖಲಾತಿ	ಡಿಪಿಇಪಿ ಶಿಕ್ಷಕರ ವೇತನ	45,76,09,417	35	
	ಪಿಪಿಸಿ **(PPC)** ವೇತನ	2,27,15,803		

ಖರ್ಚು ಮಾಡಲಾದ ಒಟ್ಟು ಮೊತ್ತ: ರೂ.1,35,68,09,795.00
ಸ್ವೀಕರಿಸಲಾದ ಒಟ್ಟು ಮೊತ್ತ: 1,49,95,31,100.00
ಮೂಲ: 1995, 1996, 1997, 1998, 1999, 2000, 2001ನೇ ಸಾಲಿನ ಡಿಪಿಇಪಿ ವಾರ್ಷಿಕ ವರದಿಗಳ ದತ್ತಾಂಶದಿಂದ ಸಂಕಲಿತ

ವಿಕೇಂದ್ರೀಕರಣ

ಜಿಲ್ಲಾ ಮಟ್ಟದ ಯೋಜನೆ: ಡಿಪಿಇಪಿ ರಾಜ್ಯ ಯೋಜನೆಯನ್ನು ಜಿಲ್ಲಾ ಮಟ್ಟದ ಯೋಜನೆಯ ಆಧಾರದ ಮೇಲೆ ರಚಿಸಬೇಕು ಮತ್ತು ಆ ಮೂಲಕ ಜಿಲ್ಲಾ ಮಟ್ಟದ ನಿರ್ದಿಷ್ಟ ಅಗತ್ಯಗಳಿಗೆ ಗಮನ ನೀಡುವಂತೆ ಇರಬೇಕು ಎಂದು ನಿರೀಕ್ಷಿಸಲಾಗಿತ್ತು. 1998 ಮತ್ತು 2002ರ ಮೊದಲ ಹಂತದ ಎರಡು ಜಿಲ್ಲೆಗಳಾದ ಕೋಲಾರ ಮತ್ತು ರಾಯಚೂರು ಜಿಲ್ಲೆಗಳ ವಾರ್ಷಿಕ ಕಾಮಗಾರಿ ಯೋಜನೆಗಳನ್ನು ಪರಿಶೀಲಿಸಲಾಯಿತು. ನಿರ್ದಿಷ್ಟ ಮಧ್ಯಪ್ರವೇಶಿಕೆಗಳನ್ನು ವಿನ್ಯಾಸಗೊಳಿಸಲು ಆಯಾ ಜಿಲ್ಲೆಯ ವೈಶಿಷ್ಟ್ಯವನ್ನು ಗಣನೆಗೆ

ತೆಗೆದುಕೊಂಡು ಯಾವುದೇ ಯೋಜನೆ ರೂಪಿಸಿದ ಬಗ್ಗೆ ಪುರಾವೆಗಳೇ ಇಲ್ಲ. ರಾಜ್ಯದ ಜಿಲ್ಲೆಗಳಲ್ಲಿ ಪಾರಿಸಾರಿಕ, ಆರ್ಥಿಕ, ಸಮಾಜೋ-ಸಾಂಸ್ಕೃತಿಕ ಹೀಗೆ ವ್ಯಾಪಕವಾದ ವಿಭಿನ್ನತೆಗಳಿವೆ, ಇದು ಜಿಲ್ಲೆಗಳ ಶಾಲೆಗಳಲ್ಲಿನ ಸಾಕ್ಷರತಾ ಮಟ್ಟ ಹಾಗೂ ಸ್ಥಿತಿಗತಿಗಳಲ್ಲಿನ ವ್ಯಾಪಕವಾದ ವ್ಯತ್ಯಾಸಗಳ ಮೂಲಕ ಪ್ರತಿಫಲಿಸುತ್ತವೆ. ಇವ್ಯಾವುವೂ ಯೋಜನೆಗಳಲ್ಲಿ ಪ್ರತಿಫಲಿಸಿರುವುದು ಕಂಡುಬಂದಿಲ್ಲ. ಅವೆಲ್ಲವುಗಳೂ ಕಡೆಗಣಿಸಲ್ಪಟ್ಟಿರುವುದನ್ನು ಇದು ಸೂಚಿಸುತ್ತದೆ. ಬದಲಿಗೆ, ಕಾರ್ಯಕ್ರಮದ ವ್ಯಾಪ್ತಿಗೆ ಒಳಪಡಬೇಕಾದ ಶಾಲೆಗಳು ಮತ್ತು ಶಿಕ್ಷಕರ ಸಂಖ್ಯೆಯನ್ನು ಮಾತ್ರ ಅವಲಂಬಿಸಿ, ಆ ಲೆಕ್ಕಾಚಾರದ ಅನುಪಾತದ ಆಧಾರದ ಮೇಲೆ ಸರಳವಾಗಿ ಅನ್ವಯಿಸಿದ ಕೈಪಿಡಿಗಳನ್ನು (ಮಾಡ್ಯೂಲ್) ರಾಜ್ಯ ಕಾರ್ಯಕ್ರಮ ನಿರ್ದೇಶಕರ (SPD) ಕಚೇರಿಯಲ್ಲೇ ಸಿದ್ಧಪಡಿಸಲಾಗಿದೆ. ಜಿಲ್ಲಾ ನಿರ್ದಿಷ್ಟ ಯೋಜನೆಗಳನ್ನು ಅಭಿವೃದ್ಧಿಪಡಿಸಲು ಜಿಲ್ಲಾ ಮಟ್ಟದಲ್ಲಿ ಯಾವುದೇ ಚರ್ಚೆಯನ್ನಾಗಲೀ ಪ್ರಕ್ರಿಯೆಯನ್ನಾಗಲೀ ನಡೆಸಿರುವುದಿಲ್ಲ ಎಂಬುದು ನಮಗೆ ತಿಳಿದು ಬಂದಿತು. ಜಿಲ್ಲಾ ನಿರ್ದಿಷ್ಟ ಸಮಸ್ಯೆಗಳನ್ನು ಗುರುತಿಸುವುದಾಗಲೀ ಅವುಗಳನ್ನು ನಿಭಾಯಿಸಲು ಕೈಗೆತ್ತಿಕೊಳ್ಳುವುದಾಗಲೀ ನಡೆದೇ ಇಲ್ಲ.

ಸ್ಥಳೀಯವಾಗಿ ನಿರ್ದಿಷ್ಟವಾಗಿರುವ ಸಮಸ್ಯೆಗಳು ಮತ್ತು ಅಲ್ಲಿನ ಅಗತ್ಯಗಳ ಬಗ್ಗೆ ಗಮನಹರಿಸುವುದರಲ್ಲಿನ ಕೊರತೆ, ಮತ್ತು ಸ್ಥಳೀಯ ಸಿಬ್ಬಂದಿಗೆ ಅವುಗಳನ್ನು ಗಮನಿಸಲು ಸಾಧ್ಯವಾಗದ ಅಸಮರ್ಥತೆ; ಇವುಗಳು ಎಷ್ಟರ ಮಟ್ಟಿಗೆ ಇದೆ ಎಂದರೆ ಸೂಕ್ಷ್ಮ ಯೋಜನೆಯ ಚಟುವಟಿಕೆಗಳನ್ನು ಕೂಡ ವಾಡಿಕೆಯ ಕಸರತ್ತುಗಳಾಗಿ ಮಾಡಲಾಗಿದೆ. ಹೀಗಾಗಿ ವಿವಿಧ ಪ್ರದೇಶಗಳ ಸೂಕ್ಷ್ಮ ಯೋಜನೆಗಳೆಲ್ಲವೂ ಬಹಳ ಮಟ್ಟಿಗೆ ಒಂದೇ ತೆರನಾಗಿದ್ದು, ಅವುಗಳ ನಡುವೆ ಯಾವುದೇ ವ್ಯತ್ಯಾಸ ಕಂಡುಬರುವುದಿಲ್ಲ. ಇದಲ್ಲದೆ, ಸೂಕ್ಷ್ಮ ಯೋಜನೆಯ ದತ್ತಾಂಶ ಮತ್ತು ಮಾಹಿತಿಗಳೆಲ್ಲವೂ ಕೇವಲ ಕಾಗದದ ಹಾಳೆಯ ಮೇಲೆ ಮಾತ್ರ ನಡೆದ ಚಟುವಟಿಕೆಗಳಾಗಿ ಉಳಿಯುತ್ತವೆ. ಗುರುತಿಸಿರುವ ಸಮಸ್ಯೆಗಳ ಪರಿಹಾರಕ್ಕಾಗಿ ಯಾವ ಕ್ರಮಗಳನ್ನು ಅಥವಾ ಕಾರ್ಯತಂತ್ರಗಳನ್ನು ಕೈಗೊಳ್ಳಲಾಗಿದೆ ಎಂಬುದನ್ನು ಸೂಚಿಸುವಂತಹ ಯಾವುದೇ ಅಂಶವಾಗಲೀ ಅನುಸರಣೆಯಾಗಲೀ ಕಂಡುಬರುವುದಿಲ್ಲ.

ಪ್ರತಿ ಜಿಲ್ಲೆಯಲ್ಲೂ ಪ್ರಾಥಮಿಕ ಶಿಕ್ಷಣಕ್ಕೆ ಬೆಂಬಲ ಒದಗಿಸಲು 1993ರಲ್ಲಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ- ಡಯೆಟ್ (District Institute for Education and Training - DIET) ಗಳನ್ನು ಸ್ಥಾಪಿಸಲಾಯಿತು. ಯೋಜನೆ ಮತ್ತು ನಿರ್ವಹಣೆಗಳಂತಹ ವಿಭಾಗಗಳನ್ನು ಹೊಂದಿದ್ದರೂ ಕೂಡ ಅವು ಜಿಲ್ಲಾ ಮಟ್ಟದ ಯೋಜನೆಯ ಭಾಗವಾಗಲಿಲ್ಲ. ಅವು ಡಿಪಿಇಪಿಯ ಜಿಲ್ಲಾ ಮಟ್ಟದ ಕಾರ್ಯ ನಿರ್ವಾಹಕ ಸಂಸ್ಥೆಗಳ ಭಾಗವೂ ಆಗಿಲ್ಲ. ಪ್ರತಿ ಜಿಲ್ಲೆಯ ವಾರ್ಷಿಕ ಕಾರ್ಯ ಯೋಜನೆಯಲ್ಲಿ ವಿವರಿಸಲಾಗಿರುವ ಕಾರ್ಯಕ್ರಮಗಳು ಯಾವುವೂ ಶೈಕ್ಷಣಿಕ ಮಾನವ ಸಂಪನ್ಮೂಲ ಬಲವರ್ಧನೆಗೆ ಜಿಲ್ಲಾ ಮಟ್ಟದಲ್ಲಿ ಯಾವುದೇ ಪ್ರಯತ್ನಗಳಾಗಿರುವುದನ್ನಾಗಲೀ ಅಥವಾ ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳ ಒಳಗೊಳಿಸಿಕೊಳ್ಳುವಿಕೆಯನ್ನಾಗಲೀ ಸೂಚಿಸುವುದಿಲ್ಲ.

ಸಮುದಾಯ ಸಂಘಟನೆ: ವಿಕೇಂದ್ರೀಕರಣಕ್ಕೆ ಒತ್ತು ನೀಡಿರುವ ಡಿಪಿಇಪಿಯಲ್ಲಿನ ಮತ್ತೊಂದು ವೈಶಿಷ್ಟ್ಯವೆಂದರೆ ಶಾಲೆಗಳ ಆಡಳಿತ ಮತ್ತು ಶಾಲೆಗಳ ಅಭಿವೃದ್ಧಿಗಾಗಿ ಸ್ಥಳೀಯ ಸಮುದಾಯಗಳು ಮತ್ತು ವಿಶೇಷವಾಗಿ, ಸ್ಥಳೀಯ ಚುನಾಯಿತ ಪ್ರತಿನಿಧಿಗಳ ನಡುವೆ ಅವರ ಕೊಡುಗೆಯನ್ನು ಪ್ರೋತ್ಸಾಹಿಸಲು ಸಮನ್ವಯತೆಯನ್ನು ಸಾಧಿಸಿರುವುದು. ಕರ್ನಾಟಕದಲ್ಲಿ ಸಮುದಾಯದ ಒಳಗೊಳ್ಳುವಿಕೆ ವಿಶಿಷ್ಟ ರೀತಿಯ ಎರಡು ಸ್ವರೂಪಗಳನ್ನು ಪಡೆದುಕೊಂಡಿತು. ಗ್ರಾಮ ಶಿಕ್ಷಣ ಸಮಿತಿಗಳನ್ನು (VEC – Village Education Committee) ಸ್ಥಾಪಿಸಿರುವುದು ಮೊದಲನೆಯ ಸ್ವರೂಪವಾಗಿದೆ. ಸ್ವಂತ ಜಮೀನು ಹೊಂದಿರುವ ಹಾಗೂ ಇತರರಿಗೆ ಹೋಲಿಸಿದರೆ ಉತ್ತಮ ಸ್ಥಿತಿಯಲ್ಲಿರುವ ಬಲಾಢ್ಯ ಕುಟುಂಬಗಳು ಮಾತ್ರವೇ ಶಿಕ್ಷಕರು ಹಾಗೂ ಅಧಿಕಾರಶಾಹಿಯೊಂದಿಗೆ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಸಾಧ್ಯವಾಗಿರುವ ಕೆಲವು ಗ್ರಾಮಗಳಲ್ಲಿ ಮಾತ್ರ ಇವು

ಪರಿಣಾಮಕಾರಿಯಾಗಿದ್ದವು. 2002ರಿಂದ ಗ್ರಾಮ ಶಿಕ್ಷಣ ಸಮಿತಿಗಳನ್ನು ವಿಸರ್ಜಿಸಲಾಯಿತು, ಪೋಷಕರ ನಡುವಿನಿಂದ ಆಯ್ದ ಸದಸ್ಯರನ್ನೊಳಗೊಂಡ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ (School Development and Management Committee – SDMC) ಗಳು ಎಂಬ ಹೊಸ ವ್ಯವಸ್ಥೆಯನ್ನು ಪ್ರಾರಂಭಿಸಲಾಯಿತು. ಎರಡನೆಯ ಸ್ವರೂಪವೆಂದರೆ, ಶಾಲೆಯ ಮೂಲ ಸೌಕರ್ಯಗಳ ನಿರ್ಮಾಣ ಅಥವಾ ಸುಧಾರಣೆಗಾಗಿ ಜಮೀನು ಮತ್ತು ಅಥವಾ ಹಣದ ರೂಪದಲ್ಲಿ ಕೊಡುಗೆ ನೀಡಲು ಸಮುದಾಯವನ್ನು ಪ್ರೋತ್ಸಾಹಿಸುವುದು. ಡಿಪಿಇಪಿ ಹಂತ- Iರಲ್ಲಿ ಶಾಲಾ ನಿರ್ಮಾಣ ಮತ್ತು ಮೂಲ ಸೌಕರ್ಯ ಕಲ್ಪಿಸುವ ವೆಚ್ಚವನ್ನು ಹಂಚಿಕೊಳ್ಳಲು ಸಮುದಾಯಗಳಿಗೆ ಪ್ರೇರಣೆ ನೀಡಲಾಯಿತು. ಹಣಕಾಸು ಅಥವಾ ಜಮೀನು ಇತ್ಯಾದಿಗಳಂತಹ ಸಂಪನ್ಮೂಲಗಳನ್ನು ಸಂಗ್ರಹಿಸಲು ಸಾಧ್ಯವಾಗದ ಅಥವಾ ಗಮನಾರ್ಹ ರೀತಿಯಲ್ಲಿ ರಾಜಕೀಯ ಪ್ರಭಾವವನ್ನು ಚಲಾಯಿಸಲಾಗದ ಸಮುದಾಯಗಳು ಶಾಲೆಗಳೇ ಇಲ್ಲದಿರುವ ಅಥವಾ ಇರುವ ಅಸಮರ್ಪಕ ವ್ಯವಸ್ಥೆಗಳಲ್ಲಿಯೇ ಮುಂದುವರೆಯಬೇಕಾಗಿ ಬಂದಿತು [ವಾಸವಿ ಮತ್ತು ಚಾಮರಾಜ್2001].

ಶಾಲಾ ದಾಖಲಾತಿ ಮತ್ತು ಉಳಿಸಿಕೊಳ್ಳುವಿಕೆ

ಡಿಪಿಇಪಿ ತನ್ನ ಕೆಲವು ಚಟುವಟಿಕೆಗಳ ನೇರ ಪರಿಣಾಮವಾಗಿ ಶಾಲಾ ದಾಖಲಾತಿ ಮತ್ತು ಶಾಲೆಯಲ್ಲಿ ಮಕ್ಕಳು ನಿರಂತರವಾಗಿ ಮುಂದುವರಿಯುವಂತೆ ಮಾಡುವುದರ ಮೇಲೆ ಧನಾತ್ಮಕವಾದ ಪ್ರಭಾವವನ್ನು ಬೀರಿದೆ ಎಂದು ಪರಿಗಣಿಸಲಾಗಿದೆ. ಆದಾಗ್ಯೂ, ಲಭ್ಯವಿರುವ ದತ್ತಾಂಶಗಳು ಮತ್ತು ಅಂಕಿಅಂಶಗಳನ್ನು ನಾವು ಪರಿಶೀಲಿಸಿದಾಗ ಅವುಗಳನ್ನು ಡಿಪಿಇಪಿಯಿಂದ ಆಗಿರುವ ಸಾಧನೆಗಳೆಂದು ಸ್ವತಂತ್ರವಾಗಿ ನಿರ್ಣಯಿಸಲು ನಮಗೆ ಸಾಧ್ಯವಾಗಲಿಲ್ಲ. ಪ್ರಚುರಪಡಿಸಲಾದ ಹೇಳಿಕೆಯೊಂದು ಡಿಪಿಇಪಿ – I ನಡೆದ ಜಿಲ್ಲೆಗಳಲ್ಲಿನ ಶಾಲಾ ದಾಖಲಾತಿಯಲ್ಲಿ ಶೇ 9.52 ರಷ್ಟು ಹೆಚ್ಚಳ ಆಗಿದೆ ಎಂದು ತಿಳಿಯಪಡಿಸುತ್ತದೆ [ಶೈಕ್ಷಣಿಕ ಕಾರ್ಯಪಡೆ 2001] . ಆದರೆ, ಈ ವರದಿಯು ಶಾಲಾ ದಾಖಲಾತಿಯಲ್ಲಿ ಒಟ್ಟಾರೆಯಾಗಿ ರಾಜ್ಯದಲ್ಲಿ ಶೇ.4ರಷ್ಟು ಹೆಚ್ಚಳ ಉಂಟಾಗಿದೆ ಎಂದು ಹೇಳುತ್ತಿಲ್ಲ. ಆದ್ದರಿಂದ, ವಾಸ್ತವವಾಗಿ, ಡಿಪಿಇಪಿ ಚಟುವಟಿಕೆಗಳಿಂದ ಆಗಿದೆ ಎಂದು ಹೇಳಿಕೊಳ್ಳಬಹುದಾದ ಶೇಕಡಾವಾರು ಪ್ರಮಾಣವನ್ನು ಶೇ.5.52ಕ್ಕೆ ಮಾರ್ಪಡಿಸಬೇಕಾಗುತ್ತದೆ. ಡಿಪಿಇಪಿ ಹಂತ - IIರ ಜಿಲ್ಲೆಗಳಲ್ಲಿನ ದಾಖಲಾತಿಯು ಕೇವಲ ಶೇ.5.7 (ಒಟ್ಟಾರೆ ರಾಜ್ಯದ ಹೆಚ್ಚಳದ ಅಂಕಿ ಅಂಶಗಳನ್ನು ಗಣನೆಗೆ ತೆಗೆದುಕೊಂಡ ನಂತರ ಸುಮಾರು 2 ಪ್ರತಿಶತಕ್ಕೆ ಮಾರ್ಪಡಿಸಲಾಗಿದೆ) ಮಾತ್ರ ಇದೆ ಏಕೆ ಎಂಬುದರ ಕುರಿತು ಯಾವುದೇ ವರದಿಗಳು ವಿಮರ್ಶೆಯನ್ನಾಗಲೀ ಚಿಂತನೆಯನ್ನಾಗಲೀ ಮಾಡುವುದಿಲ್ಲ. ಬಾಲಕಿಯರು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಮಕ್ಕಳು ಈ ಕಾರ್ಯಕ್ರಮದಲ್ಲಿ ವಿಶೇಷ ಗಮನವಹಿಸಬೇಕಾದ ಗುಂಪುಗಳಾಗಿದ್ದರೂ ವಾರ್ಷಿಕ ವರದಿಗಳಲ್ಲಿ ಪ್ರಸ್ತುತಪಡಿಸಲಾಗಿರುವ ದತ್ತಾಂಶಗಳು ಕೂಡ ಈ ಗುಂಪುಗಳ ಕುರಿತು ಪ್ರತ್ಯೇಕ ಅಂಕಿಅಂಶಗಳನ್ನೇನೂ ನೀಡುವುದಿಲ್ಲ. ಹಾಗಾಗಿ ನಿರ್ದಿಷ್ಟವಾದ ಈ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಆಗಿರುವ ಸಾಧನೆಗಳ ಕುರಿತು ನಿರ್ಣಯಿಸಲು ನಮಗೆ ಸಾಧ್ಯವಾಗದು.

ಶಿಕ್ಷಕರ ತರಬೇತಿ, ಪಠ್ಯ ಪುಸ್ತಕಗಳು ಮತ್ತು ಕಲಿಕಾರ್ಥಿಗಳ ಸಾಧನೆಗಳು

ಗುಣಮಟ್ಟದಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ, ಪಠ್ಯ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ಸೇವಾನಿರತ ಶಿಕ್ಷಕರ ತರಬೇತಿ ಕೂಡ ಒಂದು ಪ್ರಮುಖ ಕ್ಷೇತ್ರವಾಗಿ ಪರಿಗಣಿಸಲ್ಪಟ್ಟು ಹೆಚ್ಚಿನ ಲಕ್ಷ್ಯವನ್ನು ಪಡೆದುಕೊಂಡಿತು. ಕರ್ನಾಟಕದಲ್ಲಿ ಬಳಸಲಾದ ಆರಂಭಿಕ ಸರಣಿ ತರಬೇತಿಗಳ ಪ್ಯಾಕೇಜನ್ನು ಡಿಎಸ್‌ಇಆರ್‌ಟಿ (DSERT – Department of State Educational Research and Training), ಸ್ವಯಂ ಸೇವಾ ಸಂಸ್ಥೆಗಳು ಮತ್ತು ಕಲಾವಿದರು ಅಭಿವೃದ್ಧಿಪಡಿಸಿದರು. ಅವರೆಲ್ಲರೂ ಬಡ ಮಕ್ಕಳಿಗೆ ಕಲಿಸಲು ಹಾಗೂ ಜಾತಿ ಮತ್ತು ಲಿಂಗತ್ವದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಶಿಕ್ಷಕರ ವರ್ತನೆಗಳ ಮೇಲೆ ಪ್ರಭಾವ

ಬೀರಲು ಪ್ರಯತ್ನಿಸಿದರು. ವಿಷಯ ಜ್ಞಾನವನ್ನು ಹೆಚ್ಚಿಸಲು ಕೆಲವು ಯೋಜನೆಗಳಿದ್ದವು. ನುರಿತ ಪ್ರಮುಖ ತರಬೇತಿದಾರರು ಬ್ಲಾಕ್‌ಸಂಪನ್ಮೂಲ ಕೇಂದ್ರ (BRC – Block Resource Center) ಮತ್ತು ಸಮೂಹ ಸಂಪನ್ಮೂಲ ಕೇಂದ್ರ (CRC – Cluster Resource Center)ಗಳ ಬೋಧಕ ವರ್ಗಕ್ಕೆ ಪಿರಮಿಡ್‌ಮಾದರಿಯಲ್ಲಿ ತರಬೇತಿ ನೀಡಿದರು. ಅಂದರೆ, ಮೊದಲ ಹಂತದಲ್ಲಿ ತರಬೇತಿ ಹೊಂದಿದ ಈ ಬೋಧಕ ವರ್ಗ ಮುಂದಿನ ಹಂತವಾಗಿ ಶಿಕ್ಷಕರಿಗೆ ತರಬೇತಿ ನೀಡಬೇಕಾಗಿತ್ತು. ರಾಜ್ಯದ ಎಲ್ಲ ಪ್ರಾಥಮಿಕ ಶಾಲಾ ಶಿಕ್ಷಕರಿಗೆ 2001ರಿಂದ ಸೇವಾ ನಿರತ ಶಿಕ್ಷಕರ ತರಬೇತಿ ಕಾರ್ಯಕ್ರಮಗಳನ್ನು ('ಚೈತನ್ಯ') ನಡೆಸಲಾಗುತ್ತಿದೆ. ಈ ಕಾರ್ಯಕ್ರಮಗಳನ್ನು ಡಿಪಿಇಪಿ ಮಾದರಿಯಂತೆ ಅಭಿವೃದ್ಧಿಪಡಿಸಲಾಗಿದೆ. ಪ್ರಾಥಮಿಕ ಶಾಲಾ ಪಠ್ಯಪುಸ್ತಕ ಪರಿಷ್ಕರಣೆಯನ್ನು ಕೂಡ ಡಿಪಿಇಪಿ ಮೂಲಕ ಪ್ರಾರಂಭಿಸಲಾಯಿತು. ಗಣಿತ ಪ್ರಯೋಗಾಲಯಗಳನ್ನು ಸಹ ಪರಿಚಯಿಸಲಾಯಿತು ಮತ್ತು ಎಲ್ಲಾ ಸಮೂಹ ಸಂಪನ್ಮೂಲ ಕೇಂದ್ರ (CRC) ಮತ್ತು ಬ್ಲಾಕ್‌ಸಂಪನ್ಮೂಲ ಕೇಂದ್ರ (BRC) ಗಳ ಸಂಪನ್ಮೂಲ ವ್ಯಕ್ತಿಗಳಿಗೆ ಇದರಲ್ಲಿ ತರಬೇತಿ ನೀಡಲಾಯಿತು.

ಡಿಪಿಇಪಿಯೊಂದಿಗೆ ಈ ತರಬೇತಿಗಳಲ್ಲಿ ಕೆಲಸ ಮಾಡಿದ ಕೆಲವು ಸ್ವಯಂ ಸೇವಾ ಸಂಸ್ಥೆಗಳು ಒಂದು ಮಟ್ಟದ ಹತಾಶೆಯನ್ನು ವ್ಯಕ್ತಪಡಿಸಿವೆ. ಡಿಪಿಇಪಿ ಅವರಿಗೆ ಸರ್ಕಾರಿ ಶಾಲೆಗಳ ಗುಣಾತ್ಮಕ ಸುಧಾರಣೆಯ ಒಂದು ಅವಕಾಶವನ್ನು ಒದಗಿಸಿದೆ. ಆದರೆ ತಮ್ಮ ಯೋಜನೆಯನ್ನು ರೂಪಿಸುವಾಗ ಕ್ಷೇತ್ರ ಮಟ್ಟದ ಮೇಲ್ವಿಚಾರಣೆ ಮತ್ತು ಅನುಸರಣೆಯನ್ನು ಅದರಲ್ಲಿ ಸೇರಿಸಲು ಸಾಧ್ಯವಾಗಲಿಲ್ಲ. ಒಟ್ಟಾರೆಯಾಗಿ, ಈ ಎಲ್ಲ ಪ್ರಯತ್ನಗಳ ಫಲದಾಯಕತೆಯನ್ನು ನಿರ್ಣಯಿಸಲು ತರಗತಿಯ ಪ್ರಕ್ರಿಯೆಗಳ ಮತ್ತು ಚಾಲ್ತಿಯಲ್ಲಿರುವ ಕಲಿಕಾ ಬೋಧನಾ ವಿಧಾನಗಳ ವ್ಯವಸ್ಥಿತವಾದ ಅಧ್ಯಯನಗಳು ನಡೆದಿರುವುದು ಬಹಳ ಕಡಿಮೆ. ಇರುವ ಒಂದೇ ಒಂದು ಅಧ್ಯಯನವೆಂದರೆ, ಅದು ಕ್ಲಾರ್ಕ್(2000) - ಡಿಪಿಇಪಿ ಶಿಕ್ಷಕರು 'ಚಟುವಟಿಕೆ ಆಧಾರಿತ', 'ಮಗು ಕೇಂದ್ರಿತ', 'ಸಂತೋಷದಾಯಕ ಕಲಿಕೆ' ಮುಂತಾದ ಹೊಸ ಪರಿಭಾಷೆಯನ್ನು ಕಲಿತಿದ್ದರೂ ಡಿಪಿಇಪಿ ಶಿಕ್ಷಕರ ಮತ್ತು ಡಿಪಿಇಪಿ ಅಲ್ಲದ ಶಿಕ್ಷಕರ ನಡುವೆ ಅವರ ತಿಳವಳಿಕೆ ಮತ್ತು ಅಭ್ಯಾಸಗಳಲ್ಲಿ ಪ್ರಶಂಸಾರ್ಹವಾದ ಯಾವುದೇ ವ್ಯತ್ಯಾಸವಿಲ್ಲ ಎಂದು ಅದು ಗುರುತಿಸಿದೆ. ಇವೆರಡು ವಿಧಾನಗಳೂ ಈಗಾಗಲೇ ಅಸ್ತಿತ್ವದಲ್ಲಿರುವ ಕಲಿಕಾ ಬೋಧನಾ ಪದ್ಧತಿಗಳಿಂದಲೇ ಹೊರಹೊಮ್ಮಿದವುಗಳು ಎಂದು ವರದಿಯಾಗಿದೆಯಲ್ಲದೆ ಮಗು ಕೇಂದ್ರಿತ ಕಲಿಕೆಗೆ ವಿಶೇಷ ಗಮನ ನೀಡಿರುವುದಕ್ಕೆ ಯಾವುದೇ ಪುರಾವೆಗಳಿಲ್ಲ. ನಮಗೆ ತಿಳಿದಿರುವಂತೆ, ಶಿಕ್ಷಕರು ಮತ್ತು ಶಿಕ್ಷಕರ ತರಬೇತಿಗಳ ಕುರಿತಂತೆ ಯಾವುದೇ ಇತರ ಅಧ್ಯಯನ ಲಭ್ಯವಿಲ್ಲ. ಪಠ್ಯಕ್ರಮ ಪರಿಷ್ಕರಣೆಯಲ್ಲಿ ಆರಂಭ ಬಿಂದುವಾಗಿ ಮಗುವನ್ನು ಅರ್ಥಮಾಡಿಕೊಳ್ಳುವಲ್ಲಿನ ಒಳತಿಳಿವನ್ನು ಆಧರಿಸಿದ 'ಗುಣಮಟ್ಟ' ದ ಅಸಮರ್ಪಕ ಕಲ್ಪನೆಯ ಕುರಿತು ಸೂಚಿಸಿರುವ ಹಲವು ಶಿಕ್ಷಣ ತಜ್ಞರು [ಧನ್‌ಕರ್2000] ಡಿಪಿಇಪಿ ಕೂಡ ಇದೇ ಗ್ರಹಿಕೆಯನ್ನುಬಹಳ ಮಟ್ಟಿಗೆ ಅವಲಂಬಿಸಿದೆ ಎಂದು ವಾದಿಸುತ್ತಾರೆ. ಹಲವು ಶಿಕ್ಷಕರು ಈ ಮಾತಿಗೆ ತಮ್ಮ ದನಿಗೂಡಿಸುತ್ತಾ, ತರಬೇತಿಗಳು I ಮತ್ತು II ನೆಯ ತರಗತಿಗಳ ಮೇಲೆ ಮಾತ್ರ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದು, ಸರಳವಾದ ಪರಿಕಲ್ಪನೆಗಳನ್ನು ಮಾತ್ರ ನಿಭಾಯಿಸಲು ಕಲಿಸಿವೆ ಎಂದು ಹೇಳುತ್ತಾರೆ. ಇದರೊಂದಿಗೆ, ಅನೇಕ ಶಿಕ್ಷಕರು ಮತ್ತು ವೀಕ್ಷಕರು ಸೂಚಿಸಿರುವಂತೆ ಹಾಗೂ ನಾವು ಹಲವು ಶಾಲೆಗಳಲ್ಲಿ ಗಮನಿಸಿರುವಂತೆ 'ಆನಂದಮಯ ಕಲಿಕೆ' ಮತ್ತು ಬೋಧನೆ ಎಂದರೆ, ಮಕ್ಕಳನ್ನು ತರಗತಿಯಲ್ಲಿ ಹಾಡಲು ಮತ್ತು ಕುಣಿಯಲು ತೊಡಗಿಸುವುದು ಎಂಬುದಕ್ಕೆ ಸಮಾನಾರ್ಥಕವಾದಂತೆ ಇವೆ. ಉತ್ಸಾಹಿ ಮತ್ತು ಆಸಕ್ತ ಶಿಕ್ಷಕರು ಉನ್ನತ ತರಗತಿಗಳಲ್ಲಿ ಕಲಿಸಲು ನಿರ್ದಿಷ್ಟವಾದ ಒಳಹರಿವುಗಳನ್ನು ನೀಡಬೇಕಾಗಿ ಕೋರಿದರೂ ಅವರ ವಿನಂತಿಗಳು ಪರಿಗಣಿಸಲ್ಪಟ್ಟಿಲ್ಲ.

ಶಿಕ್ಷಕರಿಗಾಗಿ ಮತ್ತು ಶಾಲೆಗಳಿಗಾಗಿ ಡಿಪಿಇಪಿ ಅನುದಾನದ ಅವಕಾಶವನ್ನು ಕಲ್ಪಿಸಿದೆ. ಇದು ಶಿಕ್ಷಕರಿಗೆ ಬೋಧನಾ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಳ್ಳಲು ಮತ್ತು ಶಾಲೆಯ ಅಭಿವೃದ್ಧಿಯನ್ನು ಸಾಧಿಸಲು

ಅನುವು ಮಾಡಿಕೊಡುತ್ತದೆ (ಪ್ರತಿ ಶಿಕ್ಷಕರಿಗೆ ರೂ.500 ಮತ್ತು ಪ್ರತಿ ಶಾಲೆಗೆ ರೂ.2000 ಮೊತ್ತವನ್ನು ಮೀಸಲಾಗಿ ಇರಿಸಿದೆ). ಶಿಕ್ಷಕರು ಈ ನಿಧಿಯನ್ನು ಯಾವ ರೀತಿಯಲ್ಲಿ ಬಳಸುತ್ತಿದ್ದಾರೆ ಮತ್ತು ಅವರು ತಮ್ಮ ವೃತ್ತಿಪರತೆಯನ್ನು ಹೆಚ್ಚಿಸುವ ತರಬೇತಿಗಳ ಜೊತೆಗೆ ಇದನ್ನು ತಾಳೆ ಮಾಡಿ ನೋಡಿದ್ದಾರೆಯೇ ಎಂಬುದನ್ನು ಡಿಪಿಇಪಿ ವಾರ್ಷಿಕ ವರದಿಗಳು ಸೂಚಿಸಿಲ್ಲ. 1999 ಮತ್ತು2000ದ ಸಾಲಿನ ವಾರ್ಷಿಕ ವರದಿಗಳು ಈ ನಿಧಿಯ ಹಂಚಿಕೆಯಲ್ಲಿ ಕಡಿತ ಉಂಟಾಗಿರುವುದನ್ನು ಸೂಚಿಸಿವೆ (1999ರಲ್ಲಿ ಸುಮಾರು 300 ಲಕ್ಷದಿಂದ 2000 ದಲ್ಲಿ ಸುಮಾರು 98 ಲಕ್ಷಕ್ಕೆ). ಆದಾಗ್ಯೂ, ಈ ವೆಚ್ಚದಲ್ಲಿ ಆಗಿರುವ ಕಡಿತಕ್ಕೆ ಯಾವುದೇ ವಿವರಣೆ ಇಲ್ಲ.

ಕಲಿಕಾರ್ಥಿಗಳ ಸಾಧನೆಯಂತಹ ಕ್ಷೇತ್ರಗಳಿಗೆ ಕೂಡ ಯಾವುದೇ ವ್ಯವಸ್ಥಿತ ಮೇಲ್ವಿಚಾರಣೆ ಅಥವಾ ಮೌಲ್ಯಮಾಪನ ಇರಲಿಲ್ಲ ಎಂಬುದು ನಮಗೆ ತಿಳಿಯಿತು. ಕಲಿಕಾ ಫಲಿತಾಂಶಗಳಲ್ಲಿ ಪ್ರಗತಿಶೀಲ ಸುಧಾರಣೆ ಕಂಡುಬಂದಿದೆಯೇ ಎಂದು ಮೌಲ್ಯಮಾಪನ ಮಾಡಲು ನಿಯತಕಾಲಿಕವಾಗಿ ಪರೀಕ್ಷೆಯನ್ನು ನಡೆಸಲಾಗಿಲ್ಲ. ತರಗತಿ I ಮತ್ತು IV ರ ಫಲಿತಾಂಶಗಳನ್ನು ವಾರ್ಷಿಕ ವರದಿಗಳಲ್ಲಿ ಸಾಂದರ್ಭಿಕವಾಗಿ ಅಲ್ಲಲ್ಲಿ ಪ್ರಸ್ತುತಪಡಿಸಲಾಗಿದೆ. ಆದರೆ, ಡಿಪಿಇಪಿ ಪೂರ್ವ ಮತ್ತು ಡಿಪಿಇಪಿ ಇಲ್ಲದ ಶಾಲೆಗಳ ನಡುವಿನ ಹೋಲಿಕೆಗಳಿಲ್ಲದ ಕಾರಣ ಡಿಪಿಇಪಿ ಮಧ್ಯಪ್ರವೇಶಿಕೆಯ ಪರಿಣಾಮವಾಗಿ ವಿದ್ಯಾರ್ಥಿಗಳಲ್ಲಿ ಆಗಿರುವ ಕಲಿಕಾ ಸುಧಾರಣೆಗಳ ಬಗ್ಗೆ ಯಾವುದೇ ತೀರ್ಮಾನಕ್ಕೆ ಬರುವುದು ಸಾಧ್ಯವಾಗಲಿಲ್ಲ. ಹಂತ- Iರ ಡಿಪಿಇಪಿ ಜಿಲ್ಲೆಗಳನ್ನು ಮೌಲ್ಯಮಾಪನ ಮಾಡಲು ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ (MHRD – Ministry of Human Resource Development) ನಿಯೋಜಿಸಿದ ಅಧ್ಯಯನದಲ್ಲಿ ಪರೀಕ್ಷೆಯ ಫಲಿತಾಂಶಗಳು IVನೇ ತರಗತಿಯಲ್ಲಿನ ಅರ್ಧದಷ್ಟು ಮಕ್ಕಳು ಇನ್ನೂ ಭಾಷಾ ಸಾಮರ್ಥ್ಯಗಳನ್ನು ಸಾಕಷ್ಟು ಗಳಿಸಿಲ್ಲ ಎಂದು ಸೂಚಿಸಿದೆ ಎಂದು ನಮಗೆ ತಿಳಿಯಿತು [ದೀವಾನ್2002].[5] ಕಳೆದ ಕೆಲವು ವರ್ಷಗಳಲ್ಲಿ ಡಿಪಿಇಪಿ ಹಂತ- I ರ ಕಾರ್ಯಕ್ರಮ ನಡೆದ ಮತ್ತು ಡಿಪಿಇಪಿ ಇಲ್ಲದ ಜಿಲ್ಲೆಗಳ VIIನೇ ತರಗತಿಯ ಪರೀಕ್ಷೆಯ ಫಲಿತಾಂಶಗಳನ್ನು ಪರಿಶೀಲಿಸುವ ಮೂಲಕ ಕಲಿಕೆಯ ಮೇಲೆ ಆಗಿರುವ ಪರಿಣಾಮಗಳನ್ನು ನಿರ್ಣಯಿಸಲು ನಾವು ಪ್ರಯತ್ನಿಸಿದ್ದೇವೆ. ಸಾಧನೆಯ ಮಟ್ಟದ ಕುರಿತು ಮಾಡಲಾಗಿರುವ ವರದಿಗಳು ಒಟ್ಟಾರೆಯಾಗಿ ಅತೀವ ಉತ್ಪ್ರೇಕ್ಷೆಯಿಂದ ಕೂಡಿದ್ದು ವಿಶ್ವಾಸಾರ್ಹವಾಗಿಲ್ಲದೇ ಇರುವುದರಿಂದ ಅಂತಹ ವರದಿಗಳಿಂದ ಯಾವುದೇ ಪ್ರಯೋಜನವಾಗಲಿಲ್ಲ.[6] ಝಾ ಮತ್ತು ಇತರರು (2000) ಗುರುತಿಸಿರುವಂತೆ ರಾಜ್ಯದಲ್ಲಿ ಶಾಲೆಗಳ ಮೇಲ್ವಿಚಾರಣೆ ಅಸಮರ್ಪಕವಾಗಿದ್ದು, ಇದು ಪ್ರತಿಪಾದಿತ ಗುರಿಗಳು ಮತ್ತು ನಿಜವಾದ ಸಾಧನೆಗಳ ನಡುವಿನ ಅಂತರಕ್ಕೆ ಕಾರಣವಾಗಿದೆ.

'ನಲಿ ಕಲಿ' ಕರ್ನಾಟಕ ಡಿಪಿಇಪಿಯ ಅತ್ಯಂತ ಯಶಸ್ವಿ ಮತ್ತು ಜನಜನಿತ ಕಾರ್ಯಕ್ರಮವಾಗಿದೆ. ಇದು ಡಿಪಿಇಪಿಗೂ ಮೊದಲೇ ಹೆಚ್‌ಡಿ ಕೋಟೆಯ ಸರ್ಕಾರಿ ಶಾಲೆಗಳ ಶಿಕ್ಷಕರು ರಿಶಿ ವ್ಯಾಲಿ ಗ್ರಾಮೀಣ ಕೇಂದ್ರದ ಜೊತೆಗಿನ ಸಂವಾದದ ಮೂಲಕ ರೂಪಿಸಿದ ಒಂದು ಯುನಿಸೆಫ್‌ಪ್ರಾಯೋಜಿತ ಬೋಧನಾ ಕ್ರಮವಾಗಿದೆ. ಆದಾಗ್ಯೂ, ಬ್ಲಾಕ್‌ಒಂದರಲ್ಲಿ ಅದರ ಅನುಷ್ಠಾನ ಮತ್ತು ಅದು ಪಡೆದುಕೊಂಡ ತ್ವರಿತ ಮತ್ತು ವ್ಯಾಪಕ ಆಸಕ್ತಿಗೆ ಡಿಪಿಇಪಿ ಅದಕ್ಕೆ ನೀಡಿದ ಬೆಂಬಲವೇ ಕಾರಣವಾಗಿತ್ತು. ಹೆಚ್‌ಡಿ ಕೋಟೆ ಮತ್ತು ಒಂದು ಹೊಸ ಜಿಲ್ಲೆಯಲ್ಲಿ ಇತ್ತೀಚೆಗೆ ನಲಿಕಲಿಯ ಮೌಲ್ಯಮಾಪನ ಮಾಡಲಾಗಿದೆ [ಆನಂದಲಕ್ಷ್ಮಿ ಮತ್ತು ಕೃಷ್ಣಮೂರ್ತಿ 2002]. ಇತರ ಮೌಲ್ಯಮಾಪನ ಅಧ್ಯಯನಗಳಂತೆಯೇ ಇದು ಕೂಡ ಕಲಿಕಾರ್ಥಿಗಳ ಸಾಧನೆಯ ಮೇಲೆ ಆ ಕಲಿಕಾ ಕ್ರಮ ಪ್ರಭಾವ ಬೀರಿದೆ ಎಂಬುದನ್ನು ಯಾವುದೇ ಸಂದಿಗ್ಧತೆಗಳಿಲ್ಲದೆಯೇ ಹೇಳಲು ಸಾಧ್ಯವಾಗಿಲ್ಲ. ಯಾವುದೇ ಮೌಲ್ಯಮಾಪನ ಅಧ್ಯಯನವು ಆ ಕ್ಷೇತ್ರದ ಮೇಲೆ ಆಗಿರುವ ಪ್ರಭಾವವನ್ನು ನಿರ್ಣಯಿಸುವುದು ಹೇಗೆ ಎಂಬುದರ ಸೂಕ್ಷ್ಮವಾದ ತಿಳಿವಳಿಕೆ ಹೊಂದಿರುವ ಅಗತ್ಯವನ್ನು ಇದು ಸೂಚಿಸುತ್ತದೆ. ಹೆಚ್‌ಡಿ ಕೋಟೆಯ ಶಿಕ್ಷಕರು ಆತ್ಮವಿಶ್ವಾಸ ಮತ್ತು ಉತ್ಸಾಹ ಹೊಂದಿರುವುದನ್ನು

ಈ ಅಧ್ಯಯನ ಗಮನಿಸಿದೆ. ಆದರೆ, ಇದೇ ಕಾರ್ಯಕ್ರಮವನ್ನು ಅನುಕರಣೆ ಮಾಡಿ ಕಾರ್ಯಗತಗೊಳಿಸಿದ ಇತರ ಬ್ಲಾಕ್‌ಗಳಲ್ಲಿ ಈ ವಿಶೇಷತೆಗಳನ್ನು ಕೂಡ ಗಮನಿಸಲು ಸಾಧ್ಯವಾಗಲಿಲ್ಲ.

ಡಿಪಿಇಪಿ ಕುರಿತ ಕ್ಷೇತ್ರ ಮಟ್ಟದ ಮೌಲ್ಯಮಾಪನಗಳು ಮಿಶ್ರ ಅಭಿಪ್ರಾಯಗಳಿಂದ ಕೂಡಿವೆ. ಶಾಲೆಗಳಿಗೆ ಕೊಂಚ ಬಲ ತುಂಬಿದ್ದಕ್ಕಾಗಿ ಮತ್ತು ಶಾಲೆಗಳತ್ತ ಹೊಸ ದೃಷ್ಟಿಕೋನದ ಗಮನ ಹರಿಸಲು ಕಾರಣವಾಗಿದ್ದಕ್ಕಾಗಿ ಶಿಕ್ಷಣ ಇಲಾಖೆಯ ಅನೇಕ ಸಿಬ್ಬಂದಿ ಹಾಗೂ ಶಿಕ್ಷಕರು ಡಿಪಿಇಪಿ ಕುರಿತು ಮೆಚ್ಚುಗೆ ಸೂಚಿಸುತ್ತಾರೆ. ಶಾಲೆಗಳ ಮೂಲ ಸೌಕರ್ಯದಲ್ಲಿ ಆದ ಸುಧಾರಣೆಗಳನ್ನು ಹಲವು ಶಿಕ್ಷಕರು ಕಾರ್ಯಕ್ರಮದ ಕೊಡುಗೆ ಎಂದು ಉಲ್ಲೇಖಿಸುತ್ತಾರೆ. ಕಲಿಕಾ ಬೋಧನಾ ವಿಧಾನಗಳಲ್ಲಿ ಹೊಸತನವನ್ನು ಆವಿಷ್ಕರಿಸಲು ಮತ್ತು ಮುಂತೊಡಗಲು ದೊರೆತ ಅವಕಾಶಗಳಿಗಾಗಿ ಬ್ಲಾಕ್‌ಸಂಪನ್ಮೂಲ ಕೇಂದ್ರಗಳ ಹಲವು ಸಿಬ್ಬಂದಿ ಕೂಡ ಮೆಚ್ಚುಗೆ ವ್ಯಕ್ತಪಡಿಸಿದರು. ಆದರೆ, ಬಹಳ ಮಟ್ಟಿಗೆ ಇದು ರಾಜ್ಯ ಯೋಜನಾ ಕಚೇರಿಯಲ್ಲಿ ಯೋಜನೆಯ ಚುಕ್ಕಾಣಿ ಹಿಡಿದು ಕುಳಿತಿರುವ ವ್ಯಕ್ತಿಯನ್ನು ಅವಲಂಬಿಸಿರುತ್ತದೆ ಎಂದು ಕೂಡಾ ಅವರು ಹೇಳುತ್ತಾರೆ. ಪ್ರಸ್ತುತ ತಮ್ಮ ಪಾತ್ರ ಕಡಿಮೆಯಾಗಿದ್ದು, ಕೇವಲ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕೆ ಸೀಮಿತವಾಗಿದೆ ಎಂದು ಅವರು ಅಭಿಪ್ರಾಯಪಡುತ್ತಾರೆ. ಕಳೆದ ವರ್ಷದಿಂದ ಸಭೆಗಳು ನಿಯಮಿತವಾಗಿಲ್ಲ ಅಥವಾ ಕೇವಲ ಕಾಟಾಚಾರಕ್ಕೆ ನಡೆದಿದ್ದು ಬಹುತೇಕ ಅವು ಹಲವು ಸಮೀಕ್ಷೆಗಳಿಗಾಗಿ ದತ್ತಾಂಶ ಸಂಗ್ರಹಿಸುವುದರತ್ತ ಮಾತ್ರ ಗಮನವನ್ನು ಕೇಂದ್ರೀಕರಿಸಿವೆ.

III
ಡಿಪಿಇಪಿಯ ಪ್ರಭಾವ

ಈ ಲೇಖನದ ಕೊನೆಯ ಭಾಗದಲ್ಲಿ ನಾವು ಶಿಕ್ಷಣ ಕ್ಷೇತ್ರದಲ್ಲಿ ಡಿಪಿಇಪಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳು ಮತ್ತು ಸಮಸ್ಯೆಗಳನ್ನು ಪರಿಶೀಲಿಸಿದ್ದೇವೆ.

ಸಾಂಸ್ಥಿಕ ಸಂರಚನೆಗಳು

ಕಾರ್ಯಕ್ರಮವು ಹೆಚ್ಚಿನ ದಕ್ಷತೆಯಿಂದ ಕೂಡಿರಲು ಮತ್ತು ಸ್ಥಳೀಯ ನಾವೀನ್ಯತೆಯನ್ನು ಮೈಗೂಡಿಸಿಕೊಂಡ ಮುಂತೊಡಗುವಿಕೆಗಳನ್ನು ಪ್ರೋತ್ಸಾಹಿಸಲು ಡಿಪಿಇಪಿ ಸ್ವತಂತ್ರ ಸಮಿತಿ (ಸೊಸೈಟಿ) ಯೊಂದನ್ನು ರಚಿಸಿ ಅದರ ಮೂಲಕ ಕಾರ್ಯಾಚರಿಸುವುದು ಅವಶ್ಯಕ ಎಂದು ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ(ಎಂಎಚ್‌ಆರ್‌ಡಿ)ಯ ಮಾರ್ಗಸೂಚಿಗಳು ಸಮರ್ಥಿಸಿದವು. ಈಗಾಗಲೇ ಅಸ್ತಿತ್ವದಲ್ಲಿರುವ ಸಾಮಾನ್ಯ ಅಧಿಕಾರಶಾಹಿ ಸಂಸ್ಥೆಗಳು ಆ ಉದ್ದೇಶವನ್ನು ಸಾಧಿಸಲಾರವು ಎಂಬ ನಂಬಿಕೆ ಇದರ ಹಿಂದೆ ಇದ್ದಂತಿದೆ. ಈ ಸಮಿತಿಯು ಇಲಾಖೆಯ ಅಧಿಕಾರಿಗಳನ್ನು ಅವರ ಪದನಿಮಿತ್ತ ಸಾಮರ್ಥ್ಯದಲ್ಲಿ ಮಂಡಳಿಯ ಸದಸ್ಯರನ್ನಾಗಿ ಹೊಂದಿದ್ದರೂ ಇದು ಸಾಮಾನ್ಯವಾದ ಅಧಿಕಾರಶಾಹಿ ಮತ್ತು ಆಡಳಿತಾತ್ಮಕ ಮಾನದಂಡಗಳ ಹೊರಗೆ ಕಾರ್ಯನಿರ್ವಹಿಸುತ್ತದೆ. ಆದರೆ ಅದರ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯು ಪಾರದರ್ಶಕವಾಗಿಲ್ಲ. ಸರ್ಕಾರಿ ಇಲಾಖೆಗಳಲ್ಲಿ ಇರುವಂತೆ ಉತ್ತರದಾಯಿತ್ವದ ಸಾಮಾನ್ಯ ವ್ಯವಸ್ಥೆಗಳು ಇಂತಹ ಸಮಿತಿಗಳಿಗೆ ನೇರವಾಗಿ ಅನ್ವಯಿಸುವುದಿಲ್ಲ. ಸಮಿತಿಯ ವಾರ್ಷಿಕ ವರದಿಗಳು ಈ ಯೋಜನೆಯೊಂದಿಗೆ ಯಾವ ರೀತಿಯ ಕಾರ್ಯಯೋಜನೆ ಹಾಗೂ ಚರ್ಚೆಗಳನ್ನು ಒಳಗೊಂಡಿವೆ ಎಂಬುದರ ಸಮರ್ಪಕ ಚಿತ್ರಣವನ್ನು ಒದಗಿಸುವುದಿಲ್ಲ.[7]

ಒಂದು ಸ್ವತಂತ್ರ ಸಮಿತಿಯಾಗಿ ಆರ್ಥಿಕ ಮತ್ತು ಇತರ ನಿರ್ಧಾರಗಳನ್ನು ಕೈಗೊಳ್ಳುವ ದಕ್ಷತೆ ವಿಶೇಷವಾಗಿ ನಿಧಿಯನ್ನು ಒದಗಿಸುವ ಸಂಸ್ಥೆಯ ದೃಷ್ಟಿಯಿಂದ ಅನುಕೂಲಕರವಾಗಿರಬಹುದು. ಸಮಾನಾಂತರ ಸಂರಚನೆಗಳ ಸಾಂಸ್ಥಿಕ ಪರಿಣಾಮಗಳು ಇಂತಹ ಮಾದರಿಗಳ ಕುರಿತು ಮರುಚಿಂತನೆಯನ್ನು ಅಪೇಕ್ಷಿಸುವಷ್ಟು ಮಹತ್ವದ್ದಾಗಿದೆ. ಕಾರ್ಯಕ್ರಮವನ್ನು ನಡೆಸಲು ಹೊಸ ಕಚೇರಿಯ ಸ್ಥಳಾವಕಾಶ,

ವಾಹನಗಳು, ಕಂಪ್ಯೂಟರ್‌ಗಳೊಂದಿಗೆ ಜಿಲ್ಲಾ ಮಟ್ಟದಲ್ಲಿ ಸಮಾನಾಂತರ ಸಂರಚನೆಗಳನ್ನು ಸ್ಥಾಪಿಸಲಾಗಿದೆ ಎಂದು ರಾಜ್ಯ ಯೋಜನಾ ನಿರ್ದೇಶಕರ ಕಚೇರಿಯ ಸಿಬ್ಬಂದಿಗಳು ಒಪ್ಪಿಕೊಂಡರು. ಡಿಪಿಇಪಿಯ ಭಾಗವಾಗಿರದ ಶಿಕ್ಷಣ ಇಲಾಖೆಯ ಸಿಬ್ಬಂದಿ ಜಿಲ್ಲಾ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಭಿನ್ನ ಬಗೆಯ ಮಾನದಂಡಗಳನ್ನು ಗಮನಿಸಿದರು. ಪ್ರಮಾದವಶಾತ್'ನಿಮ್ಮ ಡಿಪಿಇಪಿ' ಎಂಬ ಭಾವನೆ ಸೃಷ್ಟಿಯಾಗಿರುವುದರ ಕುರಿತು ಅವರು ಹೇಳಿದರು. ಕಾರ್ಯಕ್ರಮದ ಅವಧಿಯ ಅಂತಿಮ ಘಟ್ಟದಲ್ಲಿ ಡಿಪಿಇಪಿಯು ರಾಜ್ಯದ ಕಾರ್ಯಕ್ರಮಗಳೊಂದಿಗೆ ಸಮನ್ವಯಗೊಳ್ಳಬೇಕಾಗಿರುವುದರಿಂದ ಇಂತಹ ಆಳವಾದ ಬಿರುಕು ಕಂಡುಬರುವುದು ವಿಶೇಷವಾಗಿ ಸಮಸ್ಯಾತ್ಮಕವಾಗಿದೆ. ಒಟ್ಟಾರೆಯಾದ 'ದಕ್ಷತೆ'ಗಾಗಿ ಡಿಪಿಇಪಿ ಮತ್ತು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ (CPI – Commissioner for Public Instruction) ನಡುವೆ ಹೆಚ್ಚಿನ ಸಮನ್ವಯತೆಯ ಅಗತ್ಯವಿದೆ ಎಂದು ಸೂಚಿಸಲಾಗಿದೆ. ಕಳೆದ ಎರಡು ವರ್ಷಗಳಲ್ಲಿ, ಡಿಪಿಇಪಿಯಲ್ಲಿ ಮತ್ತು ಕರ್ನಾಟಕದ ಎಲ್ಲ ಡಿಪಿಇಪಿ ಜಿಲ್ಲೆಗಳಲ್ಲಿ ಏಕರೂಪತೆಯತ್ತ ಮುನ್ನಡೆಸಲು ಉದ್ದೇಶಪೂರ್ವಕ ಪ್ರಯತ್ನಗಳು ನಡೆದಿವೆ. ಬ್ಲಾಕ್‌ಸಂಪನ್ಮೂಲ ಕೇಂದ್ರ ಮತ್ತು ಸಮೂಹ ಸಂಪನ್ಮೂಲ ಕೇಂದ್ರಗಳನ್ನು ರಾಜ್ಯದಾದ್ಯಂತ ಒಂದೇ ಸ್ವರೂಪದಲ್ಲಿರುವಂತೆ ಸ್ಥಾಪಿಸಲಾಗಿದೆ; ಅವೇ ಪಠ್ಯಪುಸ್ತಕಗಳು ಮತ್ತು ಶಿಕ್ಷಕರ ತರಬೇತಿಗಳನ್ನು ಈಗ ಎಲ್ಲೆಡೆ ಅನ್ವಯಿಸಲಾಗಿದೆ.

ನಿರ್ದಿಷ್ಟವಾಗಿ ಶಿಕ್ಷಣದಂತಹ ಕ್ಷೇತ್ರದಲ್ಲಿ, ಗುಣಮಟ್ಟದ ಮೇಲೆ ಪ್ರಭಾವ ಬೀರಿ ಮಹತ್ತರ ಪರಿಣಾಮವನ್ನು ಉಂಟುಮಾಡಲು ಪ್ರಯತ್ನಿಸುವ ಯಾವುದೇ ಯೋಜನೆಯು 'ಕಾಲಮಿತಿ'ಗೆ ಒಳಪಟ್ಟಿದ್ದು, 'ಪ್ರಾಯೋಗಿಕ ಮಾದರಿ' ಮಾತ್ರ ಆಗಿರಬಹುದು. ದೀರ್ಘಾವಧಿಯಲ್ಲಿ ವ್ಯವಸ್ಥೆಯು ಈ ಚಟುವಟಿಕೆಗಳನ್ನು ತನ್ನದಾಗಿಸಿಕೊಳ್ಳುತ್ತದೆ ಎಂಬ ಅಂದಾಜಿನ ಮೇಲೆ ಅಂತಹದ್ದನ್ನು ರೂಪಿಸಲಾಗಿರುತ್ತದೆ. ಇಂತಹ ಸನ್ನಿವೇಶದಲ್ಲಿ ಯೋಜನಾ ಚಟುವಟಿಕೆಗಳನ್ನು ಇಲಾಖೆಯಿಂದ ಬೇರ್ಪಡಿಸುವುದು ಒಂದು 'ಸಮರ್ಥ' ಚಿಂತನೆ ಎನಿಸುವುದಿಲ್ಲ. ಆದಾಗ್ಯೂ, ಇಂತಹ ಸಮಿತಿಗಳನ್ನು ಮುನ್ನಡೆಸುವ ಆಡಳಿತಗಾರರು ಗಮನಿಸಿರುವಂತೆ ಕೆಲವೊಂದು ಉಪಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗುವುದಕ್ಕಾಗಿ ಅವರು ಇಂತಹ ಅವಕಾಶಗಳನ್ನು ಅನುಭವಿಸಲು ಇಷ್ಟಪಡುತ್ತಾರೆ. ಡಿಪಿಇಪಿಯೊಂದಿಗೆ ಕೆಲಸ ಮಾಡಿದ ಕೆಲವು ಸ್ವಯಂ ಸೇವಾ ಸಂಸ್ಥೆಗಳ ಸಲಹೆಗಾರರು ಇಂತಹ ಕೆಲವು ಸಮಾನಾಂತರ ಸಂಸ್ಥೆಗಳ ಮೂಲಕ ಮಾತ್ರ ಬದಲಾವಣೆಗಳನ್ನು ತರಬಹುದು ಮತ್ತು ಶೈಕ್ಷಣಿಕ ವ್ಯವಸ್ಥೆಯಲ್ಲಿ ಹೊಸ ಒಳಹರಿವುಗಳನ್ನು ಸುಗಮಗೊಳಿಸಬಹುದು ಎಂದು ಅಭಿಪ್ರಾಯಪಡುತ್ತಾರೆ. ಅಸ್ತಿತ್ವದಲ್ಲಿರುವ ಸರ್ಕಾರಿ ಸಂರಚನೆಗಳು ಅಂತಹ ಸಾಧ್ಯತೆಗಳನ್ನು ಸಕ್ರಿಯಗೊಳಿಸಲು ಸಾಧ್ಯವಾಗದೆ ಇರುವುದಕ್ಕಾಗಿ ಅವುಗಳನ್ನು ಪುನರುಜ್ಜೀವನಗೊಳಿಸುವ ಅಗತ್ಯವನ್ನು ಇದು ಸೂಚಿಸುತ್ತದೆ. ಡಿಪಿಇಪಿ ಅವಧಿಯಲ್ಲಿ ಕಲಿತ ಈ ಪಾಠದಿಂದಾಗಿ ಕರ್ನಾಟಕ ರಾಜ್ಯ ಶಿಕ್ಷಣ ಇಲಾಖೆಯ ಅಡಿಯಲ್ಲಿ ಸರ್ವ ಶಿಕ್ಷಣ ಅಭಿಯಾನ ಅಥವಾ ಎಸ್‌ಎಸ್‌ಎ (SSA) ರೂಪದಲ್ಲಿ ಕೇಂದ್ರದಿಂದ ಹೊಸ ನೆರವು ಬಂದಿರುವುದು ಗಮನಾರ್ಹವಾಗಿದೆ.

ಪ್ರಾಥಮಿಕ ಶಿಕ್ಷಣಕ್ಕೆ ಬಜೆಟ್‌ನಲ್ಲಿ ಹೆಚ್ಚಿನ ಮೊತ್ತವನ್ನು ಮೀಸಲಿರಿಸಲು ಯಾವುದೇ ರಾಜಕೀಯ ಇಚ್ಛಾಶಕ್ತಿ ಇಲ್ಲದಿರುವಾಗ, ಸಾಮಾಜಿಕ ವಲಯದ ವೆಚ್ಚದ ಅಗತ್ಯಗಳನ್ನು ಪೂರೈಸಲು ಸಾಲಗಳ ಲಭ್ಯತೆಯು ತಮಗೆ ಅಗತ್ಯ ಹತೋಟಿಯನ್ನು ಒದಗಿಸುತ್ತದೆ ಎಂಬ ಅಭಿಪ್ರಾಯವನ್ನು ಅಧಿಕಾರಿಗಳು ವ್ಯಕ್ತಪಡಿಸಿದ್ದಾರೆ. ರಾಜ್ಯದಲ್ಲಿ ಶೈಕ್ಷಣಿಕ ಚಟುವಟಿಕೆಗಳು ಬಜೆಟ್‌ನಿಂದ ಆಚೆಗೆ ಮತ್ತು ರಾಜ್ಯ ಶಾಸಕಾಂಗದ ಹಾಗೂ ಒಟ್ಟಾರೆ ಶಿಕ್ಷಣ ನೀತಿಯ ವ್ಯಾಪ್ತಿಯಿಂದ ಹೊರಗೆ ನಡೆಯುವ ಈ ಪ್ರವೃತ್ತಿಯು ಶೈಕ್ಷಣಿಕ ಕ್ಷೇತ್ರದ ಮೇಲೆ ನಕಾರಾತ್ಮಕ ಪರಿಣಾಮಗಳನ್ನು ಉಂಟುಮಾಡುತ್ತದೆ. ವಾಸ್ತವವಾಗಿ, ಕರ್ನಾಟಕದಲ್ಲಿ ನಾವು ಯಾವುದೇ ಸುಸಂಬದ್ಧ ಶಿಕ್ಷಣ ನೀತಿ ಇಲ್ಲದೆಯೇ ಪ್ರಸ್ತುತ ಅಂತಹ ನೆರವು ಪಡೆದು ನಡೆಸುವ ಕಾರ್ಯಕ್ರಮಗಳ ಸಂಖ್ಯೆಯಲ್ಲಿ ಬೆಳವಣಿಗೆಯನ್ನು ಕಾಣುತ್ತಿದ್ದೇವೆ.

ಬ್ಲಾಕ್‌ಸಂಪನ್ಮೂಲ ಕೇಂದ್ರ ಹಾಗೂ ಸಮೂಹ ಸಂಪನ್ಮೂಲ ಕೇಂದ್ರಗಳು ನೇರವಾಗಿ ಡಿಪಿಇಪಿಯ ರಾಜ್ಯ ಯೋಜನಾ ಕಚೇರಿಯ ಕಾರ್ಯಜಾಲದೊಂದಿಗೆ ಜೋಡಿಸಲ್ಪಟ್ಟಿದ್ದು, ಶಿಕ್ಷಕರ ತರಬೇತಿ ಅಥವಾ ಕಲಿಕಾ ಸಾಮಗ್ರಿ ಅಭಿವೃದ್ಧಿಗಾಗಿ ರಾಜ್ಯ ಯೋಜನಾ ಕಚೇರಿಯಲ್ಲಿ ರೂಪಿಸಲಾದ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವುದನ್ನು ನಿರೀಕ್ಷಿಸಲಾಗಿದೆ. ಡಿಪಿಇಪಿ ಹಂತ- I ಪ್ರಾರಂಭಗೊಂಡ ವೇಳೆಗೆ ಜಿಲ್ಲಾ ಮಟ್ಟದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳ ಶೈಕ್ಷಣಿಕ ಬೆಂಬಲಕ್ಕಾಗಿ ಕೇಂದ್ರೀಯ ಯೋಜನೆಯ ಮೂಲಕ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (DIET) ಗಳನ್ನು ಸ್ಥಾಪಿಸಲಾಯಿತು. ಆದಾಗ್ಯೂ, ಡಯೆಟ್‌ಮತ್ತು ಡಿಪಿಇಪಿ ನಡುವೆ ಯಾವುದೇ ಸಂಬಂಧ ಇರಲಿಲ್ಲ. ಪ್ರಾರಂಭದಲ್ಲಿ, ಕಾರ್ಯಕ್ರಮಕ್ಕೆ ಸಂಬಂಧಿಸಿದ ಕೆಲವು ಅಂಶಗಳಲ್ಲಿ ಡಯೆಟ್‌ಬೋಧಕ ವರ್ಗವನ್ನು ಭಾಗಿಯಾಗಿಸಿಕೊಳ್ಳುವ ಪ್ರಯತ್ನಗಳು ನಡೆದವೆಂದು ನಮಗೆ ತಿಳಿದು ಬಂದಿತು. ಆದಾಗ್ಯೂ, ಒಂದು ಕಡೆ, ಡಯೆಟ್‌ಬೋಧಕ ವರ್ಗ ಪ್ರಾಥಮಿಕ ಶಿಕ್ಷಣಕ್ಕೆ ಸೂಕ್ತವಾಗಿ ಅಣಿಯಾದವರಲ್ಲ, ಹಾಗೂ ಮತ್ತೊಂದೆಡೆ ಡಿಪಿಇಪಿ ಕಾರ್ಯಕ್ರಮದ ಸಂರಚನೆಗಳಿಗೆ ಡಯೆಟ್‌ಗಳ ಒಳಗೊಳ್ಳುವಿಕೆಯ ಅವಶ್ಯಕತೆ ಇರಲಿಲ್ಲ (ಡಿಪಿಇಪಿ ಮಾರ್ಗಸೂಚಿಗಳಲ್ಲಿ ಅವರ ಪಾತ್ರದ ಬಗ್ಗೆ ಯಾವುದೇ ಉಲ್ಲೇಖವಿಲ್ಲ MHRD 1995). ಬ್ಲಾಕ್‌ಸಂಪನ್ಮೂಲ ಕೇಂದ್ರ ಹಾಗೂ ಸಮೂಹ ಸಂಪನ್ಮೂಲ ಕೇಂದ್ರಗಳು ರಾಜ್ಯ ಯೋಜನಾ ಕಚೇರಿಯಲ್ಲಿ ಪರಿಕಲ್ಪನೆಗೊಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದರಿಂದ ಜಿಲ್ಲಾ ಮಟ್ಟದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಾಂಸ್ಥಿಕ ಬಲವರ್ಧನೆ ನಡೆದಿಲ್ಲ. ಈ ಅವಲೋಕನವು ಕರ್ನಾಟಕ ಸೇರಿದಂತೆ ಮೂರು ರಾಜ್ಯಗಳ ಡಿಪಿಇಪಿ ಕುರಿತ ಯೂರೋಪಿಯನ್‌ಕಮಿಶನ್‌ವರದಿಯಿಂದ [ಝೂ ಮತ್ತು ಇತರರು 2001] ದೃಢೀಕರಿಸಲ್ಪಟ್ಟಿದೆ.

ಮಕ್ಕಳ ಕಲ್ಯಾಣ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೆಲಸ ಮಾಡುವ ಬುಡಕಟ್ಟು ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇವುಗಳ ನಡುವೆ ಸಂಪರ್ಕ ಸಾಧಿಸಿ, ಹಿಂದುಳಿದ ವರ್ಗಗಳ ಮಕ್ಕಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಅವುಗಳನ್ನು ಬಗೆಹರಿಸುವ ಸ್ಪಷ್ಟ ಆದೇಶವನ್ನು ಪೂರೈಸಲು ಒಟ್ಟಾಗಿ ಕೆಲಸ ಮಾಡಬಹುದಾಗಿತ್ತು. ಮಹಿಳಾ ಸಮಖ್ಯಾದಂತಹ ಸಂಸ್ಥೆಗಳು ಡಿಪಿಇಪಿಯ ಜೊತೆಗೂಡಿ ಸಮಗ್ರವಾಗಿ ತೊಡಗಿಸಿಕೊಳ್ಳಬೇಕಾಗಿತ್ತು. ಆದರೆ, ಅಂತಹ ಯಾವುದೇ ಒಳಗೊಳ್ಳುವಿಕೆ ಕುರಿತು ಯಾವುದೇ ಪುರಾವೆಗಳಿಲ್ಲ. ಶಿಕ್ಷಣದ ಅವಕಾಶಗಳನ್ನು ಹೆಚ್ಚಿಸಲು ಅಂತರ್-ಕ್ಷೇತ್ರೀಯ ವಿಧಾನವೊಂದನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗಲಿಲ್ಲ. ವಾಸ್ತವವಾಗಿ, ಜಿಲ್ಲಾ ಮಟ್ಟದಲ್ಲಿ, ಜಿಲ್ಲಾ ನಿರ್ದಿಷ್ಟ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಅವುಗಳನ್ನು ಬಗೆಹರಿಸಲು ವಿಫಲಗೊಂಡ ಕಾರಣ ಅವು ಬಲವಾಗಿ ಬೆಳೆದು ಅಂತರ್-ಸಾಂಸ್ಥಿಕ ಸಂಪರ್ಕಗಳನ್ನು ಖಾತರಿಪಡಿಸುವಲ್ಲಿ ಮತ್ತು ಅದನ್ನು ನಿರ್ಮಾಣ ಮಾಡುವಲ್ಲಿ ಸೋಲುಕಂಡಿವೆ.

ನೀತಿ ಮತ್ತು ಆದ್ಯತೆಗಳು

ದೊಡ್ಡ ಪ್ರಮಾಣದ ನಿಧಿಯ ಪ್ರವೇಶದೊಂದಿಗೆ ಪ್ರಾಥಮಿಕ ಶಿಕ್ಷಣದ ಒಟ್ಟಾರೆ ರಾಜ್ಯ ನೀತಿ ಮತ್ತು ಸಾಮಾಜಿಕ ವಲಯದಲ್ಲಿನ ಇತರ ನೀತಿಗಳಿಗೆ ಸಂಬಂಧಿಸಿದಂತೆ ಇತರ ಪ್ರಶ್ನೆಗಳು ಹುಟ್ಟುತ್ತವೆ. ಉದಾಹರಣೆಗೆ, ದೃಷ್ಟಿಕೋನದಲ್ಲಿ ಅಥವಾ ಆದ್ಯತೆಗಳಲ್ಲಿ ಡಿಪಿಇಪಿ ಯಾವುದೇ ಪಲ್ಲಟಗಳನ್ನು ಸೃಷ್ಟಿಸಿದೆಯೇ? ಈ ಪಲ್ಲಟಗಳು ನಿಧಿ ಸಂಸ್ಥೆಯ ಹಿತಾಸಕ್ತಿಗಳು ಅಥವಾ ತಿಳಿವಳಿಕೆಗೆ ಯಾವುದಾದರೂ ರೀತಿಯಲ್ಲಿ ಸಂಬಂಧಿಸಿವೆಯೇ ಮತ್ತು ಅವು ಭಾರತ ಸರ್ಕಾರದ ಹಿತಾಸಕ್ತಿಗಳಿಗಿಂತ ಭಿನ್ನವಾಗಿವೆಯೇ? ಎಂಬ ಪ್ರಶ್ನೆಗಳು ಎದುರಾಗುತ್ತವೆ.

ಶಿಕ್ಷಣದಲ್ಲಿ ಧನ ಸಹಾಯ/ ಸಾಲದ ಮೇಲಿನ ಅವಲಂಬನೆ: ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಹಣವನ್ನು ಸಾಲವಾಗಿ ಪಡೆಯುವುದರ ಮೂಲಕ ಮಾತ್ರ ಜನತೆಯನ್ನು ಶಿಕ್ಷಿತರನ್ನಾಗಿ ಮಾಡುವುದನ್ನು

ಖಾತರಿಪಡಿಸುವ ತನ್ನ ಹೊಣೆಗಾರಿಕೆಯನ್ನು ಪೂರೈಸಲು ಸಾಧ್ಯ ಎಂದು ನಂಬುವಂತೆ ಮಾಡುವುದಕ್ಕೆ ಡಿಪಿಇಪಿ ಕೊಡುಗೆ ನೀಡಿದಂತಿದೆ. ಶಿಕ್ಷಣದಲ್ಲಿ, ಅದರಲ್ಲೂ ವಿಶೇಷವಾಗಿ ಪ್ರಾಥಮಿಕ ಶಿಕ್ಷಣಕ್ಕಾಗಿ ಪಡೆದುಕೊಳ್ಳುವ ಇಂತಹ ಧನ ಸಹಾಯದಿಂದ ಒಂದು ಅಪಾಯವಿದ್ದು, ಅದು ಈಗಾಗಲೇ ಒಂದು ಅವಲಂಬಿತ ಮನಸ್ಥಿತಿಯನ್ನು ಹುಟ್ಟು ಹಾಕಿದೆ. ರಾಜ್ಯವು ಶಿಕ್ಷಣ ಕ್ಷೇತ್ರದ ಅಭಿವೃದ್ಧಿಯ ಕುರಿತು ಘೋಷಿಸುವಾಗ ಅದು ಶಿಕ್ಷಣಕ್ಕಾಗಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನ(GSDP-Gross State Domestic Product) ದಲ್ಲಿ ಹೆಚ್ಚಿನ ಭಾಗವನ್ನು ಮೀಸಲಾಗಿ ಇಟ್ಟಿಲ್ಲ. ಬದಲಿಗೆ ವಿಶ್ವ ಬ್ಯಾಂಕ್‌ಮತ್ತೆ ನಿಧಿಯ ಮೂಲವಾಗಿ ರಂಗಕ್ಕೆ ಬಂದಿದೆ. ಇಂತಹ ಬೆಳವಣಿಗೆಗಳನ್ನು ಸಮಾನವಾಗಿ ಉತ್ತೇಜಿಸುವ ಬ್ಯಾಂಕ್‌ಕೂಡ ಶಿಕ್ಷಣದಂತಹ ಕ್ಷೇತ್ರಗಳಿಗೆ ಸಾಲ ನೀಡುವುದಕ್ಕಾಗಿ ಸಕ್ರಿಯವಾಗಿ ಎದುರುನೋಡುತ್ತಿದೆ.

ಡಿಪಿಇಪಿಯಲ್ಲಿ ಮತ್ತು ಕೇಂದ್ರ ಸರ್ಕಾರದ ಈಗಿನ ಸರ್ವ ಶಿಕ್ಷಣ ಅಭಿಯಾನ (SSA) ದಲ್ಲಿ 'ಎಲ್ಲರಿಗೂ ಶಿಕ್ಷಣ' ಎಂಬ ಜೊಮ್ಟಿಯನ್‌ಘೋಷವಾಕ್ಯವನ್ನು(ಜೊಮ್ಟಿಯನ್ ಘೋಷಣೆ) ಪದೇಪದೇ ಕೇಳಿಬರುತ್ತಿದೆ; ವಿದೇಶೀ ನೆರವಿನ ನಿಧಿ ಸಂಸ್ಥೆಗಳು ಕೂಡ ಈ ಘೋಷ ವಾಕ್ಯವನ್ನು ಒಂದು ತಾರ್ಕಿಕ ಆಧಾರವಾಗಿ ಇರಿಸಿಕೊಂಡು ಪ್ರಾಥಮಿಕ ಶಿಕ್ಷಣವನ್ನು ಕೇಂದ್ರೀಕರಿಸಿ ರಾಜ್ಯಗಳು ಸಾಲಗಳು/ನಿಧಿಗಳನ್ನು ಸ್ವೀಕರಿಸುವಂತೆ ಒತ್ತಾಯಿಸುತ್ತಿವೆ (ಫೈನ್‌ಮತ್ತು ರೋಸ್‌2001ನ್ನು ಕೂಡ ನೋಡಿ). ಡಿಪಿಇಪಿ ಮತ್ತು ಸರ್ವ ಶಿಕ್ಷಣ ಅಭಿಯಾನದ ಯೋಜನಾ ದಾಖಲೆಗಳು 'ಮಿಷನ್‌ಮೋಡ್' ಎಂಬ ಪದವನ್ನು ಕೂಡ ವ್ಯಾಪಕವಾಗಿ ಬಳಸುತ್ತವೆ, ಇದು ತುರ್ತು ಪ್ರಜ್ಞೆಯನ್ನು ಹೆಚ್ಚಿಸುವುದಲ್ಲದೆ ಹಣವನ್ನು ಸಂಗ್ರಹಿಸುವ ಎಲ್ಲಾ ವಿಧಾನಗಳೂ ಸಮರ್ಥನೀಯವಾಗಿವೆ ಎಂಬ ಭಾವನೆಯನ್ನು ಹುಟ್ಟು ಹಾಕುತ್ತವೆ. ಸರ್ವ ಶಿಕ್ಷಣ ಅಭಿಯಾನದ ಕಾರ್ಯಕ್ರಮಗಳಲ್ಲಿ ಕೇಂದ್ರ ಬಜೆಟ್‌ನ ಅನುಪಾತವನ್ನು ವರ್ಷದಿಂದ ವರ್ಷಕ್ಕೆ ಪ್ರತಿಶತ 85ರಿಂದ, ಪ್ರತಿಶತ 65ಕ್ಕೆ, ಬಳಿಕ ಪ್ರತಿಶತ 50ಕ್ಕೆ, ಹೀಗೆ ಸತತವಾಗಿ ಕಡಿಮೆ ಮಾಡಿಕೊಂಡು ಬರುವಂತೆ ಆಲೋಚಿಸಲಾಗಿದೆ. ಇದು ಬಜೆಟ್ ಸಮತೋಲನ ಪೂರೈಸಲು ಧನ ಸಂಗ್ರಹ ಮಾಡುವುದು ಮಾತ್ರವಲ್ಲದೆ, ಯೋಜನೆಯ ಆವರ್ತನ ವೆಚ್ಚದ ಹೊಣೆಗಾರಿಕೆಗಳನ್ನು ರಾಜ್ಯವು ತಾನಾಗಿಯೇ ಹೊರಬೇಕಾಗುವಂತೆ ಒತ್ತಡ ಹೇರುತ್ತದೆ. ಇದು ರಾಜ್ಯವನ್ನು ಸಾಲಗಾರರ ಇಚ್ಛೆಯ ತೆಕ್ಕೆಗೆ ತಳ್ಳುವಂತಹ ಪರಿಸ್ಥಿತಿಯನ್ನು ಉಂಟುಮಾಡುವ ಹಾಗೆ ತೋರುತ್ತದೆ. 'ತುರ್ತು' ಮತ್ತು 'ಮಿಷನ್‌ಮೋಡ್' ಎಂಬ ವಾಕ್ಚಾತುರ್ಯದ ಉಮೇದಿನ ಕಾರ್ಯನಿರ್ವಹಣೆಯು ಪ್ರಕ್ರಿಯೆಗಳನ್ನು ಅವಸರಕ್ಕೆ ತಳ್ಳಬಹುದು ಮತ್ತು ಸಾಲ ನೀಡುವ ನಿಧಿ ಸಂಸ್ಥೆಗಳನ್ನು ಮೆಚ್ಚಿಸಲು ತಕ್ಷಣವೇ ಫಲಿತಾಂಶಗಳನ್ನು ಕಾಣುವ ಧಾವಂತವನ್ನು ಸೃಷ್ಟಿಸಬಹುದು. ಇವೆಲ್ಲದರಲ್ಲೂ, ಸಾಲದ ಮರುಪಾವತಿ ಹೇಗೆ ಎಂಬುದರ ಕುರಿತು ಯಾವುದೇ ಉಲ್ಲೇಖ ಅಥವಾ ಚರ್ಚೆಗಳಿಲ್ಲ. ಯಾವುದೇ ಸಾಲವನ್ನು ಪಡೆಯದೇ ಈ ಹಿಂದೆ ನಡೆದ 'ರಾಷ್ಟ್ರೀಯ ಸಾಕ್ಷರತಾ ಮಿಷನ್' ನೊಂದಿಗೆ ಇದನ್ನು ಆಸಕ್ತಿಕರವಾದ ಹೋಲಿಕೆಯನ್ನು ಮಾಡಬಹುದು.

ಪ್ರಾಥಮಿಕ ಶಿಕ್ಷಣದಲ್ಲಿ ಸಮಾನತೆಯ ಪ್ರಶ್ನೆಗಳು: ಡಿಪಿಇಪಿ ಕುರಿತು ರಾಜ್ಯದ ದೃಷ್ಟಿಕೋನ ಮತ್ತು ಅದರೊಂದಿಗಿನ ಅದರ ಸಂಪರ್ಕಗಳು ಶಿಕ್ಷಣ ಕ್ಷೇತ್ರದೆಡೆಗಿನ ಸಂಕೀರ್ಣ ನಡೆಯನ್ನು ಸೂಚಿಸುತ್ತದೆ. ಪ್ರಾಥಮಿಕ ಶಿಕ್ಷಣಕ್ಕಾಗಿ ರಾಜ್ಯದಲ್ಲಿ ಡಿಪಿಇಪಿಯನ್ನು ಪ್ರಧಾನ ಮತ್ತು ಮುಂಚೂಣಿ ಕಾರ್ಯಕ್ರಮವೆಂದು ಪರಿಗಣಿಸಲಾಗಿದ್ದರೂ, ಶಿಕ್ಷಣವನ್ನು ಎಲ್ಲರಿಗೂ ತಲುಪುವಂತೆ ಮಾಡುವಲ್ಲಿ, ಸಮಾನತೆ ಹಾಗೂ ಗುಣಮಟ್ಟವನ್ನು ತರುವಲ್ಲಿ ಇರುವ ಸಮಸ್ಯೆಗಳ ಸಂರಚನಾತ್ಮಕ ನೆಲೆಗಳನ್ನು ರಾಜ್ಯ ಕಡೆಗಣಿಸಿದೆ. ಡಿಪಿಇಪಿಯು ಕಡ್ಡಾಯವಾಗಿ ಕೈಗೊಳ್ಳಬೇಕಾದ ಅಂಶಗಳು ಪ್ರಾಥಮಿಕ ಶಿಕ್ಷಣದಲ್ಲಿನ 'ಅಂತರ'ಗಳನ್ನು ತುಂಬುವುದು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹಿನ್ನೆಲೆಯ ಮಕ್ಕಳು ಹಾಗೂ ಹೆಣ್ಣು ಮಕ್ಕಳ ಶಾಲಾ ಪ್ರವೇಶ-ದಾಖಲಾತಿ ಮತ್ತು ಹಾಜರಾತಿಯನ್ನು ಖಾತರಿಪಡಿಸಲು ಪ್ರೋತ್ಸಾಹಕಗಳು ಮತ್ತು ಕಾರ್ಯಕ್ರಮಗಳನ್ನು ಒದಗಿಸುವುದರತ್ತ ಗಮನಹರಿಸುವುದಾಗಿದೆ. ಆದರೆ ಈ ಕ್ರಿಯಾ ಯೋಜನೆಯು ಎಲ್ಲರಿಗೂ ಸಮಾನ ಮತ್ತು ಗುಣಮಟ್ಟದ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವ

ಚೌಕಟ್ಟಿನೊಳಗೆ ನೆಲೆಗೊಂಡಿಲ್ಲ. ಡಿಪಿಇಪಿ ಇಂತಹ ಕೊರತೆಗಳನ್ನು ಸರಿಪಡಿಸಲು ಶಕ್ತವಾಗಬಹುದಾಗಿದ್ದರೂ ರಾಜ್ಯವು ಸಮಾನತೆಯನ್ನು ಖಾತರಿಪಡಿಸುವಲ್ಲಿ ಕೈಗೊಳ್ಳಬಹುದಾಗಿದ್ದ ಕ್ರಮಗಳು ಹಾಗೂ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ನಿರ್ಲಕ್ಷ್ಯ ತೋರಿದೆ ಮತ್ತು ನಿಷ್ಕ್ರಿಯತೆಯಿಂದ ನಡೆದುಕೊಂಡಿದೆ. ಶಿಕ್ಷಣಕ್ಕಾಗಿ ರಾಜ್ಯ ಬಜೆಟ್‌ನ ಮೀಸಲು ಅದರ ಒಟ್ಟು ರಾಜ್ಯದ ಆಂತರಿಕ ಉತ್ಪನ್ನ (GSDP-Gross State Domestic Product) ದ ಪ್ರತಿಶತ ಕೇವಲ 3.2 ರಷ್ಟು (ಮಧ್ಯಂತರ ಹಣಕಾಸು ಯೋಜನೆಯ ದಾಖಲೆಗಳ ಪ್ರಕಾರ ಪ್ರತಿಶತ 2.5) ಎಂಬುದು ಸ್ಪಷ್ಟವಾಗಿದೆ.[8] ಈ ಮೊತ್ತವು ಇತರ ಅನೇಕ ರಾಜ್ಯಗಳ ಬಜೆಟ್‌ಹಂಚಿಕೆಗಿಂತ ಕಡಿಮೆಯಾಗಿರುವುದು ಮಾತ್ರವಲ್ಲದೆ, ರಾಷ್ಟ್ರೀಯ ಬಜೆಟ್‌ಸರಾಸರಿ 3.8 ಪ್ರತಿಶತಕ್ಕಿಂತ ಕಡಿಮೆಯಿದೆ. ಪ್ರಾಥಮಿಕ ಶಿಕ್ಷಣಕ್ಕಾಗಿ 2001-2002ರಲ್ಲಿ 2,955 ಕೋಟಿ ರೂಪಾಯಿಗಳು; ಅಂದರೆ ಒಟ್ಟಾರೆ ಶಿಕ್ಷಣಕ್ಕಾಗಿ ಮೀಸಲಿರಿಸಿದ ಶೇ.54.5 ರಷ್ಟು ಇದ್ದು ಕಳೆದ ಕೆಲವು ವರ್ಷಗಳಿಗೆ ಹೋಲಿಸಿದರೆ ಅದರಲ್ಲಿ ಗಣನೀಯ ಪ್ರಮಾಣದ ಹೆಚ್ಚಳವಾಗಿಲ್ಲ. ಪ್ರಸ್ತುತ ದರದಂತೆ ಪ್ರತಿ ಮಗುವಿಗಾಗಿ ಮಾಡುವ ಸರಾಸರಿ ಖರ್ಚು ರೂ.1350.9 ಆಗಿರುತ್ತದೆ.[9] ಇದಲ್ಲದೆ, ನಗರಗಳ ಬಡಜನರ ವಸತಿ ಪ್ರದೇಶಗಳಲ್ಲಿನ ಸರ್ಕಾರಿ ಶಾಲೆಗಳ ಅವನತಿ ತಡೆಯುವ ಬಗ್ಗೆ ರಾಜ್ಯ ಸಾಕಷ್ಟು ಗಮನಹರಿಸಿಲ್ಲ ಅಥವಾ ಈ ಪ್ರದೇಶಗಳಲ್ಲಿ ಹೆಚ್ಚಿನ ಶಾಲೆಗಳನ್ನು ತೆರೆಯುವತ್ತ ಗಮನಹರಿಸಿಲ್ಲ. ಶಾಲೆಯಲ್ಲಿ ಇರಬೇಕಾಗಿದ್ದ ಅತ್ಯಂತ ಹಿಂದುಳಿದ ಮಕ್ಕಳ ಸ್ಥಿತಿಗತಿಯ ಕುರಿತು ಮತ್ತು ಅವರಿಗೆ ದೊರಕಬೇಕಾಗಿದ್ದ ಅವಕಾಶಗಳ ಕುರಿತು ರಾಜ್ಯ ಸರ್ಕಾರ ಕ್ರಮ ಕೈಗೊಂಡಿಲ್ಲ ಎನ್ನುವುದಕ್ಕೆ ರಾಜ್ಯದಲ್ಲಿ ಬಾಲಕಾರ್ಮಿಕ ಪದ್ಧತಿ ವ್ಯಾಪಕವಾಗಿ ಹರಡಿರುವುದೇ ಸಾಕ್ಷಿಯಾಗಿದೆ.[10]

ಶಿಕ್ಷಣ ಮತ್ತು ನವ ಉದಾರೀಕರಣದ ಆರ್ಥಿಕ ಕಾರ್ಯಸೂಚಿ

ವಿಶ್ವ ಬ್ಯಾಂಕ್ಒಂದು ಪ್ರಮುಖ ನಿಧಿ ಸಂಸ್ಥೆಯಾಗಿರುವುದರಿಂದ, ಸಾಮಾಜಿಕ ವಲಯಕ್ಕೆ ಸಬ್ಸಿಡಿಗಳನ್ನು ಕಡಿಮೆ ಮಾಡುವಲ್ಲಿ ಮತ್ತು ಮಾರುಕಟ್ಟೆ ದಕ್ಷತೆಯನ್ನು ಮಾದರಿಯಾಗಿ ಉತ್ತೇಜಿಸುವಲ್ಲಿ ಬ್ಯಾಂಕ್ ತನ್ನದೇ ಆದ ನಿಲುವನ್ನು ಹೊಂದಿರುತ್ತದೆ. ಡಿಪಿಇಪಿಯ ತಾತ್ವಿಕತೆಯ ಮೇಲೆ ಹಾಗೂ ಆ ಮೂಲಕ ಶಿಕ್ಷಣದ ಕುರಿತು ರಾಜ್ಯದ ನಿಲುವಿನ ಮೇಲೆ ವಿಶ್ವಬ್ಯಾಂಕಿನ ಆ ಧೋರಣೆ ಪ್ರಭಾವ ಬೀರುತ್ತದೆ. ಪ್ರಾಥಮಿಕ ಶಿಕ್ಷಣದ ಮೇಲೆ ಹೂಡಿಕೆ ಮಾಡಲು ಬ್ಯಾಂಕ್‌ನ ತಾರ್ಕಿಕ ನೆಲೆಯು ಮೊದಲಿಗೆ ನಾಲ್ಕು ಆರ್ಥಿಕ ವಾದಗಳನ್ನು ಆಧರಿಸಿದೆ: (ಅ) ಶಿಕ್ಷಿತ ಕಾರ್ಮಿಕ ವರ್ಗದ ಮೂಲಕ ಹೆಚ್ಚಿನ ಆದಾಯದ ದರವನ್ನು ಹೆಚ್ಚಿಸುವುದು/ಉತ್ಪಾದಕತೆಯನ್ನು ಹೆಚ್ಚಿಸುವುದು (ಬ) ಕಾರ್ಮಿಕ ಮಾರುಕಟ್ಟೆಯನ್ನು ಉತ್ತಮ ಗುಣಮಟ್ಟದ ಶಿಕ್ಷಣದೊಂದಿಗೆ ಹೆಚ್ಚಿನ ನಮ್ಯತೆ, ದಕ್ಷತೆ ಮತ್ತು ಗ್ರಹಿಕೆಯುಳ್ಳದ್ದನ್ನಾಗಿ ಮಾಡುವುದು (ಕ) ಹಸಿರು ಕ್ರಾಂತಿಯ ತಂತ್ರಜ್ಞಾನ ಹಾಗೂ ಹೆಚ್ಚು ಇಳುವರಿ ನೀಡುವ ಬಿತ್ತನೆ ಬೀಜಗಳನ್ನು ಖರೀದಿ ಮಾಡಿ ಬಳಸುವ ಇಚ್ಛೆಯನ್ನು ವೇಗಗೊಳಿಸುವುದು (ಡ) ಮಹಿಳಾ ಶಿಕ್ಷಣವನ್ನು ಹೆಚ್ಚಿಸುವುದರ ಮೂಲಕ ಅವರು ಮಕ್ಕಳನ್ನು ಹೆರುವ ಪ್ರಮಾಣವನ್ನು ಕಡಿಮೆ ಮಾಡುವುದು ಮತ್ತು ಅನಾರೋಗ್ಯ ಮತ್ತಿತರ ವೆಚ್ಚಗಳನ್ನು ಕಡಿಮೆಗೊಳಿಸುವುದು ಹಾಗೂ ಕಾರ್ಮಿಕ ಶಕ್ತಿಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚು ಮಾಡುವುದು [ವಿಶ್ವ ಬ್ಯಾಂಕ್1997]. 'ಮಾನವ ಬಂಡವಾಳ' ದೃಷ್ಟಿಕೋನ ಎಂದು ಜನಪ್ರಿಯವಾಗಿ ಕರೆಯಲಾಗುವ ಇದರಲ್ಲಿ ಶಿಕ್ಷಣವನ್ನು 'ಉತ್ಪಾದಕ ಹೂಡಿಕೆ' ಎಂದು ಪರಿಗಣಿಸಲಾಗುತ್ತದೆ. ಅಂತಹ ಸರಳ ನುಡಿಗಟ್ಟಿನಲ್ಲಿ ವ್ಯಕ್ತಪಡಿಸದಿದ್ದರೂ 1960ರ ದಶಕದಿಂದಲೂ ಭಾರತ ಸರ್ಕಾರದ ಶಿಕ್ಷಣ ನೀತಿಯು ಅಂತಹದ್ದೇ ದೃಷ್ಟಿಕೋನದಿಂದ ಕೂಡಿದೆ. ಕೊಥಾರಿ ವರದಿಯಿಂದ ಆರಂಭಗೊಂಡು (ಭಾರತ ಸರ್ಕಾರ 1966) ರಾಷ್ಟ್ರೀಯ ಶಿಕ್ಷಣ ನೀತಿ (ಭಾರತ ಸರ್ಕಾರ 1986)ಮತ್ತು ಕ್ರಿಯಾ ಯೋಜನೆ (ಭಾರತ ಸರ್ಕಾರ 1988) ವರೆಗೂ ಇದು ಸ್ಪಷ್ಟವಾಗಿ ಕಂಡುಬರುತ್ತದೆ. ಆ ಪೈಕಿ ಕೊನೆಯ ಎರಡು ದಾಖಲೆಗಳನ್ನು, ತನ್ನ ಉದ್ದೇಶಗಳು ಮತ್ತು ಕ್ರಿಯಾ ಯೋಜನೆಯನ್ನು ಸಮರ್ಥಿಸಲು ಡಿಪಿಇಪಿ ಉಲ್ಲೇಖಿಸುತ್ತದೆ [MHRD 1995]. ಹೀಗಾಗಿ ಬ್ಯಾಂಕಿನ

ಹಿತಾಸಕ್ತಿಗಳು ಡಿಪಿಇಪಿಯನ್ನು ವಿನ್ಯಾಸಗೊಳಿಸಿವೆ ಎಂಬುದು ನೇರವಾಗಿ ಗೋಚರಿಸುವುದಿಲ್ಲ. ಆದಾಗ್ಯೂ, ಸ್ವತಂತ್ರ ಸಮಿತಿಯಂತಹ ಸಂರಚನೆಗಳು, ಸಾಲ ನೀಡುವ ಸಂಸ್ಥೆಗಳು ಭಾಗವಹಿಸುವ ಜಂಟಿ ಪರಿಶೀಲನಾ ಕಾರ್ಯಾಚರಣೆಗಳು, ಬ್ಯಾಂಕ್‌ವಿಧಿಸಿರುವ ಹಣಕಾಸಿನ ನಿಯಮಗಳು, ಹಾಗೆಯೇ ಯೋಜನೆಗಳು ಮತ್ತು ವರದಿಗಳಿಗಾಗಿ ಬಳಸಲಾಗುವ ನಮೂನೆಗಳು ಇವೆಲ್ಲವೂ ಬಾಂಕಿನ ವ್ಯಾಪಕ ಅನೌಪಚಾರಿಕ ಪ್ರಭಾವವನ್ನು ಸೂಚಿಸುತ್ತವೆ.

ಡಿಪಿಇಪಿ ಮೂಲಕ ಬಾಹ್ಯ ನಿಧಿ ಸಂಸ್ಥೆಯೊಂದರ ಉಪಸ್ಥಿತಿ, ಒಳಹರಿವು, ಮತ್ತು ಅದರ ಪ್ರಭಾವ ಕಾನೂನುಬದ್ಧಗೊಂಡಿರುವುದು ಮತ್ತು ಅದು ಸ್ವೀಕೃತವಾಗಿರುವುದು ಕಂಡುಬರುತ್ತದೆ. ಅಂತೆಯೇ ಸಾರ್ವಜನಿಕ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಕೆಲವು ಸಮಸ್ಯೆಗಳನ್ನು ಕಡಿಮೆಗೊಳಿಸುವಲ್ಲಿ ಖಾಸಗಿ ಮತ್ತು ಕಾರ್ಪೊರೇಟ್‌ವಲಯಗಳ ಪಾತ್ರವನ್ನು ಅನುಮತಿಸುವ ಮತ್ತು ಪ್ರೋತ್ಸಾಹಿಸುವ ಇಚ್ಛೆ ಬೆಳೆದುಬರುತ್ತಿದೆ. ವಿಶೇಷವಾಗಿ 'ದತ್ತು' ಕಾರ್ಯಕ್ರಮಗಳು ಮತ್ತು ಕಾರ್ಪೊರೇಟ್‌ಗುಂಪುಗಳೊಂದಿಗೆ ಒಪ್ಪಂದ ಪತ್ರ (MOU-Memorandum of Understanding) ಗಳಿಗೆ ಸಹಿ ಹಾಕುವ ಮೂಲಕ ಅವನ್ನು ಸುಗಮಗೊಳಿಸಲಾಗಿದ್ದು, ಇವೆಲ್ಲವನ್ನೂ ಪ್ರೋತ್ಸಾಹಿಸಲಾಗಿದೆ ಮತ್ತು ವ್ಯಾಪಕ ಪ್ರಚಾರ ನೀಡಲಾಗಿದೆ.

ಈ ಪ್ರವೃತ್ತಿಗಳು ನವ ಉದಾರವಾದಿ ಆರ್ಥಿಕ ದೃಷ್ಟಿಕೋನದ ಕಡೆಗಿನ ಚಲನೆಯನ್ನು ಸೂಚಿಸುತ್ತವೆ. ಇದರಲ್ಲಿ ನೀತಿನಿರೂಪಣೆಗಳಾಗಲೀ ಪ್ರಭುತ್ವವಾಗಲೀ ಪ್ರಾಬಲ್ಯ ಪಡೆಯುವುದಕ್ಕಿಂತ ಹೆಚ್ಚಾಗಿ ಬಂಡವಾಳ ಮತ್ತು ಮಾರುಕಟ್ಟೆ; ಹಾಗೆಯೇ ನ್ಯಾಯ ಮತ್ತು ಸಮಾನತೆಗಳಿಗೆ ಬದಲಾಗಿ ಸ್ಪರ್ಧೆ, ಉತ್ಪಾದಕತೆ ಮತ್ತು ಲಾಭದ ವಿಚಾರಗಳು ಮೇಲುಗೈ ಸಾಧಿಸುತ್ತವೆ. ಈ ಕಾರ್ಯಸೂಚಿಯನ್ನು ನಿರ್ದೇಶಿಸುವಲ್ಲಿ ವಿಶ್ವ ಬ್ಯಾಂಕ್‌ಗೆ ಒಂದು ಪಾತ್ರವಿದೆ. ಬೆಂಗಳೂರಿನಲ್ಲಿ[11] ರಾಜ್ಯವು ತನ್ನ ಧನಸಹಾಯದ ಮೂಲಕ ತಾನೇ ಸಂಘಟಿಸಿ ನಡೆಸಿಕೊಟ್ಟ, ವಿಶ್ವ ಬ್ಯಾಂಕ್‌ನ ಹಲವು ಅಧಿಕಾರಿಗಳ ಉಪಸ್ಥಿತಿಯಲ್ಲೇ ನಡೆದ 'ಎಡ್ಯುವಿಶನ್' ವಿಚಾರ ಸಂಕಿರಣದ ವೇದಿಕೆಯು ಇದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿತು. ವಿಶ್ವ ಬ್ಯಾಂಕ್‌ನ ಉಪಾಧ್ಯಕ್ಷ ಜೋಸೆಫ್‌ಎಂ ರಿಟ್ಜೆನ್‌ತಮ್ಮ ಆರಂಭಿಕ ಮುಖ್ಯ ಭಾಷಣದಲ್ಲಿ ಶಿಕ್ಷಣದಲ್ಲಿ ಮಾರುಕಟ್ಟೆಗಳು ಮಹತ್ವದ ಪಾತ್ರ ವಹಿಸಲಿವೆ ಎಂಬ ತಮ್ಮ ಮುನ್ನೋಟವನ್ನು ಎತ್ತಿ ಹಿಡಿಯುತ್ತಾ 'ಎಡ್ಯುವಿಶನ್:ಶೇಪಿಂಗ್‌ಎಡ್ಯುಕೇಶನ್‌ಇನ್‌ಕರ್ನಾಟಕ' ಎಂಬ ದಾಖಲೆಯನ್ನು ಬಿಡುಗಡೆ ಮಾಡಿದರು. ಅವರು ಮುಂದಿನ ದಿನಗಳಲ್ಲಿ ಕಾರ್ಯಸಾಧ್ಯವಾಗಲಿರುವ ಮಾದರಿಯಾಗಿ 'ಸ್ವಾಯತ್ತ ಶಾಲೆಗಳು' (ಸಾರ್ವಜನಿಕ ಹಣಕಾಸು ರಹಿತ ಮತ್ತು ಲಾಭರಹಿತ ಶಾಲೆಗಳು) ಕಲ್ಪನೆಯನ್ನು ಪ್ರಸಂಶಿಸಿ ಮಾತನಾಡಿದರು.

ಇಂತಹ 'ವೃತ್ತಿಪರ', ಹಣವಂತ ಸಂಸ್ಥೆಗಳು ಸರ್ಕಾರದೊಂದಿಗೆ ನಿಕಟವಾಗಿ ಕೆಲಸಮಾಡುವಾಗ, ಪ್ರಾಯಶ: ಅವುಗಳು ನೈಜ ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳು ಮತ್ತು ಸಂರಚನೆಗಳಿಗೆ ಪರ್ಯಾಯವಾಗಿ ಆಕ್ರಮಿಸಿಕೊಳ್ಳುವ ಅಪಾಯವಿದೆ. 'ಎಡ್ಯುವಿಶನ್' ದಾಖಲೆ ಮತ್ತು ಕಾರ್ಯಾಗಾರದ ದಿಕ್ಕಿನಲ್ಲಿ ನಡೆದ ಪ್ರಕ್ರಿಯೆಯು ಈ ಸಾಧ್ಯತೆಯನ್ನು ತೋರಿಸಿಕೊಟ್ಟಿದೆ. ಜನರ ಹಲವಾರು ತಂಡಗಳೊಂದಿಗೆ ವರ್ಷವಿಡೀ ಸಮಾಲೋಚನೆಗಳನ್ನು ನಡೆಸಲಾಗಿದ್ದರೂ ಅವು ಕೇವಲ ಆಯ್ದ ಆಹ್ವಾನಿತರ ವೇದಿಕೆಗಳಾಗಿದ್ದವು. ಶಿಕ್ಷಣ ಕ್ಷೇತ್ರದ ಕೆಲವು ಪ್ರಶ್ನೆಗಳು ಮತ್ತು ಸಮಸ್ಯೆಗಳ ಕುರಿತ ಚರ್ಚೆಗೆ ಮುಕ್ತ ವೇದಿಕೆ ಇರಲಿಲ್ಲ. ಇದೇ ಸರ್ಕಾರ ರಾಜ್ಯದ ಶೈಕ್ಷಣಿಕ ದೃಷ್ಟಿಕೋನವೊಂದನ್ನು ರೂಪಿಸಲು ನೇಮಿಸಿದ ಶಿಕ್ಷಣ ಕಾರ್ಯಪಡೆ [12] ಕೂಡ ಸಂಪೂರ್ಣ ಪ್ರಕ್ರಿಯೆಯಿಂದ ಹೊರಗೆ ಉಳಿಯುವಂತಾಯಿತು. ಎಲ್ಲ ಹಂತಗಳ ಸಮಾಲೋಚನೆಗಳಲ್ಲೂ ಶಿಕ್ಷಕರ ಸಂಘಗಳ ಹಾಗೂ ಶಿಕ್ಷಕರ ಸಂಘಟನೆಗಳ ಅನುಪಸ್ಥಿತಿ ಕೂಡ ಎದ್ದುಕಾಣುವಂತಿದೆ. ಇದು ಕೆಲವೇ ಮಂದಿ ಆಯ್ದ ಜನರಿಂದ ಕೂಡಿದ ಗುಪ್ತ ಸಮಾಲೋಚನೆಗಳಿಂದ ಹೊರಹೊಮ್ಮಿದ ಒಂದು ಒಮ್ಮತದ ದೃಷ್ಟಿಕೋನ ಎನ್ನುವುದು ಸ್ಪಷ್ಟ.

'ಎಡ್ಯುವಿಶನ್' ದಾಖಲೆ 'ಬಿಡುಗಡೆ'ಗೊಂಡ ಒಂದು ವರ್ಷದ ಬಳಿಕವೂ ಉಲ್ಲೇಖಿಸಲು ಬಾರದ ಒಂದು ಕರಡುರೂಪದ ದಾಖಲೆಯಾಗಿ ಮಾತ್ರ ಲಭ್ಯವಿದೆ. ಹಲವು ಸ್ಥಳೀಯ ಸಲಹೆಗಾರರ ಕೃಪೆಯಿಂದ ಸಿದ್ಧಪಡಿಸಲಾಗಿರುವ ಈ ದಾಖಲೆ ವಿಶ್ವ ಬ್ಯಾಂಕ್ಎತ್ತಿಹಿಡಿಯುವ ತನ್ನ ಕಾರ್ಯಸೂಚಿಯೊಂದಿಗೆ ಸ್ಥಿರವಾದ ನಿಲುವನ್ನು ಹೊಂದಿದೆ ಎಂದು ತಿಳಿಯಲಾಗಿದೆ. ಸಮಾನತೆಯ ಕುರಿತ ಪ್ರಶ್ನೆಗಳೊಂದಿಗೆ ಯಾವುದೇ ಗಂಭೀರವಾದ ತೊಡಗಿಸಿಕೊಳ್ಳುವಿಕೆ ನಮಗೆ ಅದರಲ್ಲಿ ಕಂಡುಬರಲಿಲ್ಲ. ಅಸಂಖ್ಯಾತ ಮಕ್ಕಳು ಹಾಗೂ ವಿದ್ಯಾರ್ಥಿಗಳು ಅನುಭವಿಸುತ್ತಿರುವ ಅನಾನುಕೂಲತೆಗಳನ್ನು ರಾಜ್ಯ ಯಾವ ರೀತಿಯಲ್ಲಿ ಬಗೆಹರಿಸುತ್ತದೆ ಅಥವಾ ನಿವಾರಣೆ ಮಾಡುತ್ತದೆ ಎಂಬುದರ ಕುರಿತು ಯಾವುದೇ ಉಲ್ಲೇಖವಿಲ್ಲ. ಬದಲಿಗೆ, ಗುಣಮಟ್ಟದ ಸುಧಾರಣೆಗಳು ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಹೆಚ್ಚಿನ ಹೂಡಿಕೆಗಳನ್ನು ಇದು ಶಿಫಾರಸು ಮಾಡುತ್ತದೆ. ರಾಜ್ಯ ಬಜೆಟ್‌ನ ಎಷ್ಟು ಪ್ರತಿಶತ ಅಥವಾ ಎಷ್ಟು ಪ್ರಮಾಣದಲ್ಲಿ ಅದು ಶಿಕ್ಷಣಕ್ಕೆ ಬದ್ಧವಾಗಿರಬೇಕು ಎಂಬ ಬಗ್ಗೆ ವರದಿ ಎಲ್ಲಿಯೂ ಪ್ರಸ್ತಾಪಿಸುವುದಿಲ್ಲ.

ಒಟ್ಟಾರೆಯಾಗಿ ಎಲ್ಲ ಹಂತಗಳಲ್ಲಿಯೂ ಶಿಕ್ಷಣದಲ್ಲಿ ಸಮಾನತೆ ಮತ್ತು ಸೂಕ್ತ ನೀತಿಯ ಸಮಸ್ಯೆಗಳ ವಿಚಾರದಲ್ಲಿ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವುದನ್ನು ರಾಜ್ಯ ಸರ್ಕಾರವು ಮುಂದುವರಿಸಿದೆ ಎಂಬುದು ರಾಜ್ಯವು ವಿವಿಧ ಶಿಕ್ಷಣ ಕ್ಷೇತ್ರಗಳು ಮತ್ತು ಸಂಸ್ಥೆಗಳೊಂದಿಗೆ ಆಗಾಗ ಎದುರಿಸುತ್ತಿರುವ ಬಿಕ್ಕಟ್ಟುಗಳು ಮತ್ತು ಉದ್ವಿಗ್ನತೆಗಳಲ್ಲಿ ಎದ್ದು ಕಾಣಿಸುತ್ತಿದೆ.[13] ಕಣ್ಣಿಗೆ ರಾಚುವ ಮತ್ತು ದಿನೇದಿನೆ ಹೆಚ್ಚಾಗುತ್ತಿರುವ ಈ ವಿರೋಧಾಭಾಸಗಳು, ಬಾಹ್ಯ ಅನುದಾನಿತ ಕಾರ್ಯಕ್ರಮಗಳಿಗೆ ಆಡಳಿತ ಮತ್ತು ಸಾರ್ವಜನಿಕ ವ್ಯವಸ್ಥೆಯನ್ನು ಒದಗಿಸುವ ಮೂಲಕ ರಾಜ್ಯ ತನ್ನ ಬಾಧ್ಯತೆಯ ವಿಷಯದಲ್ಲಿ ರಾಜೀ ಮಾಡಿಕೊಳ್ಳುವುದರಿಂದ ಬೆಳೆಯಬಹುದಾದ ಹದಗೆಟ್ಟ ಪರಿಸ್ಥಿತಿಯ ಬಗ್ಗೆ ನಮಗೆ ಎಚ್ಚರಿಕೆ ನೀಡುತ್ತವೆ. ಒಟ್ಟಾರೆ ಮಾರ್ಗದರ್ಶನ ಮತ್ತು ಮಾರ್ಗದರ್ಶಿ ನೀತಿಯ ಒಂದು ಚೌಕಟ್ಟು ಇಲ್ಲದಿರುವಾಗ, ಬಾಹ್ಯ ನಿಧಿ ಸಂಸ್ಥೆಗಳ ಮೂಲಕ ಮುಂಚೂಣಿಗೆ ಬಂದ ಯೋಜನೆಗಳು ಈಗ ಅನೇಕ ಖಾಸಗಿ ಕಾರ್ಪೊರೇಟ್‌ಜನೋಪಕಾರಿ ದತ್ತಿಪ್ರಯತ್ನಗಳನ್ನು ಒಳಗೊಂಡಿವೆ, ಇದು ರಾಜ್ಯಕ್ಕೆ ಸಮಾಜ ಕಲ್ಯಾಣದ 'ಅಂಜೂರ ಫಲ' ದೊರೆಯಬೇಕಾದ ಜಾಗದಲ್ಲಿ ಕೇವಲ 'ಎಲೆ'ಗಳನ್ನಷ್ಟೇ ಕುಟಿಲತೆಯಿಂದ ನೀಡಿ ಭ್ರಮೆ ಹುಟ್ಟಿಸಿದೆ. ವ್ಯಾಪಕವಾದ ಮಾಧ್ಯಮ ವರದಿಗಳು ರಾಜ್ಯಕ್ಕೂ ದಾನಿಗಳಿಗೂ ಉತ್ತಮ ಪ್ರಚಾರವನ್ನು ಒದಗಿಸಿವೆ.

ಈ ಬೆಳವಣಿಗೆಗಳ ಬಗ್ಗೆ ರಾಜ್ಯ ಮತ್ತು ಅದರ ಅಧಿಕಾರಿಗಳನ್ನು ಏಕೆ ಎಚ್ಚರಿಸಲಿಲ್ಲ ಎಂದು ಕೇಳುವ ಅನಿವಾರ್ಯತೆ ನಮ್ಮ ಮುಂದಿದೆ. ಛಿದ್ರಗೊಂಡಿರುವ ರಾಜಕೀಯ ಯಂತ್ರ, ಆಮಿಷಗಳಿಗೆ ಬಲಿಯಾಗಿರುವ ಮಾಧ್ಯಮಗಳು ಮತ್ತು ಉದಾಸೀನ ಭಾವದ ಬುದ್ಧಿಜೀವಿ ವರ್ಗದಿಂದ ಕೂಡಿದ ಸದ್ಯದ ಈ ಸಂದರ್ಭದಲ್ಲಿ ಇಂತಹ ಕಾರ್ಯಕ್ರಮಗಳ ಕುರಿತು ಹೆಚ್ಚು ಜಾಗರೂಕರಾಗಿರಬೇಕು ಮತ್ತು ರಾಜ್ಯದ ವ್ಯವಸ್ಥಿತ ಸಾಮರ್ಥ್ಯ ಹಾಗೂ ಶಕ್ತಿಯನ್ನು ಹೆಚ್ಚಿಸುವ ಪರ್ಯಾಯಗಳನ್ನು ಹುಡುಕಬೇಕಾಗಿದೆ. ಪ್ರಜಾತಾಂತ್ರಿಕತೆ, ಸಮಾನತೆ ಹಾಗೂ ಸ್ವಾವಲಂಬನೆಯ ಮಾನದಂಡಗಳ ಮೇಲೆ ಕಟ್ಟಲ್ಪಟ್ಟ ನೀತಿಯೊಂದರಿಂದ ಒಡಮೂಡಿದ ಶಿಕ್ಷಣದ ಕಾರ್ಯಕ್ರಮಗಳ ತುರ್ತು ಅವಶ್ಯಕತೆ ಇದೆ.

ಸಂಪರ್ಕ ವಿಳಾಸ:

padmasarangapani@hotmail.com

arvasavi@nias.iisc.ernet.in

ಟಿಪ್ಪಣಿಗಳು

1. ಈ ಲೇಖನ ಬೆಂಗಳೂರಿನ ಅರೂಪೆ ಚರ್ಚಾ ವೇದಿಕೆ (Arrupe Discussion Forum) ಆರಂಭಿಸಿದ ಚರ್ಚೆಗಳು ಮತ್ತು ಸಂಶೋಧನೆಗಳ ಫಲಿತಾಂಶವಾಗಿದೆ. ಕರ್ನಾಟಕದ ಶಿಕ್ಷಣ ನೀತಿಗಳನ್ನು ಪರಿಶೀಲಿಸುವುದಕ್ಕಾಗಿ ರೂಪುಗೊಂಡಿದ್ದ ಆ ಗುಂಪಿನ ಸದಸ್ಯರಾಗಿದ್ದ ಶಾಲಿನಿ ಪಂಜಾಬಿ ಮತ್ತು ಜೇನ್‌ಸಾಹಿ ಅವರು ಈ ಪ್ರಬಂಧಕ್ಕೆ ಹಲವು ಮಾಹಿತಿಗಳನ್ನು ಒದಗಿಸಿದ್ದಾರೆ. ಅರೂಪೆ ಚರ್ಚಾ ವೇದಿಕೆಯ ಇತರ ಸದಸ್ಯರಾದ ಸಾರಾ ಜೋಸೆಫ್, ಕರೋಲ್‌ಉಪಾಧ್ಯ, ಕೆ ಆರ್‌ಹರಿನಾರಾಯಣ್, ಕಾವೇರಿ ಬೋಪಯ್ಯ ಮತ್ತು ನರೇಂದರ್‌ಪಾಣಿ ಅವರುಗಳು ನೀಡಿದ ಸಲಹೆ ಹಾಗೂ ಬೆಂಬಲಕ್ಕಾಗಿ ನಾವು ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ:.
2. ನಾವು ಬಳಸಿಕೊಂಡಿರುವ ದತ್ತಾಂಶ ಹಾಗೂ ಮಾಹಿತಿಗಳು ಸಾರ್ವಜನಿಕವಾಗಿ ಲಭ್ಯವಿರುವ ದಾಖಲೆಗಳು ಮತ್ತು ವರದಿಗಳಾಗಿವೆ. ಡಿಪಿಇಪಿಯ ವಾರ್ಷಿಕ ವರದಿಗಳು (DPEP 1994, 1995, 1996, 1997, 1998, 1999, 2000, 2001) ಪ್ರಮುಖ ಮೂಲಗಳಾಗಿವೆ. ಇದರೊಂದಿಗೆ, ಝಾ ಮತ್ತು ಇತರರು, 2000 ಹಾಗೂ ಕ್ಲಾರ್ಕ್2000 ನಂತಹ ಕೆಲವು ಅಧ್ಯಯನಗಳಿಂದ ಕೆಲವು ಅಂಶಗಳನ್ನು ತೆಗೆದುಕೊಂಡಿದ್ದೇವೆ. ಸಾಲ ನೀಡುವ ಸಂಸ್ಥೆಗಳು ಮತ್ತು ಭಾರತ ಸರ್ಕಾರದ ಸದಸ್ಯರನ್ನು ಒಳಗೊಂಡಿರುವ 'ಜಂಟಿ ಅವಲೋಕನ ಕಾರ್ಯಾಚರಣೆಗಳು' (JRM – Joint Review Missions) ಯೋಜನೆಯ ನಿಯಮಿತ ಮೇಲ್ವಿಚಾರಣೆ ನಡೆಸುತ್ತದೆ. ಆದರೆ ಇದರ ವರದಿಗಳು ಸಾರ್ವಜನಿಕ ದಾಖಲೆಗಳಲ್ಲ. ಹಾಗೆಯೇ, ಡಿಪಿಇಪಿ ವಾರ್ಷಿಕ ವರದಿಗಳು ಕೂಡ ಇದಕ್ಕೆ ಸಂಬಂಧಿಸಿದ ಯಾವುದೇ ಮಾಹಿತಿಗಳನ್ನು ಹೊಂದಿರುವುದಿಲ್ಲ (ವರದಿಗಳಲ್ಲಿ ಅವರ ಭೇಟಿಗಳನ್ನು ದಾಖಲಿಸುವ ಛಾಯಾಚಿತ್ರಗಳಿರುತ್ತವೆ). ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ (MHRD), ಎಡ್‌ಸಿಲ್(Ed CIL – Education Consultants India Ltd) ಹಾಗೂ ಶೈಕ್ಷಣಿಕ ಯೋಜನೆ ಮತ್ತು ಆಡಳಿತದ ರಾಷ್ಟ್ರೀಯ ಸಂಸ್ಥೆ (NIEPA - National Institute for Educational Planning and Administration) ಇವುಗಳ ಮೂಲಕ ಮೌಲ್ಯಮಾಪನಗಳು ನಡೆದಿವೆ ಎಂದು ನಾವು ಅನೌಪಚಾರಿಕ ಮೂಲಗಳಿಂದ ಮಾಹಿತಿ ಸಂಗ್ರಹಿಸಿದ್ದೇವೆ (ಆನಂತರ, ಹೆಚ್ಚಿನಂಶ ಇವೆಲ್ಲ ಅಧ್ಯಯನಗಳ ವರದಿಗಳನ್ನು ಪಡೆದುಕೊಳ್ಳಲು ನಮಗೆ ಸಾಧ್ಯವಾಗಿಲ್ಲ [ಜಯಲಕ್ಷ್ಮಿ 1998 ಮತ್ತು ಕ್ಲಾರ್ಕ್2000]. ಅಧ್ಯಯನಗಳನ್ನು ನಡೆಸಿರುವುದಾಗಿ ಕೆಲವು ವಾರ್ಷಿಕ ವರದಿಗಳು ಉಲ್ಲೇಖಿಸುತ್ತವೆ, ಆದರೆ, ಅವುಗಳ ಶೀರ್ಷಿಕೆ, ಸಂಶೋಧಕರ ವಿವರ, ಸಾರಾಂಶ, ಅವು ಕಂಡುಕೊಂಡ ಅಂಶಗಳು, ಅವುಗಳ ಲಭ್ಯತೆಗಳ ಕುರಿತು ಯಾವುದೇ ಮಾಹಿತಿಯನ್ನು ಅವು ಒದಗಿಸುವುದಿಲ್ಲ. ಡಿಪಿಇಪಿ ಕಚೇರಿಯಿಂದಲೂ ಈ ಅಧ್ಯಯನಗಳನ್ನು ಪಡೆದುಕೊಳ್ಳಲು ನಮಗೆ ಸಾಧ್ಯವಾಗಲಿಲ್ಲ. ಕಲಿಕಾ ಬೋಧನಾ ವಿಧಾನಗಳ ಮಧ್ಯಪ್ರವೇಶಿಕೆಗಳ ಕುರಿತು ಪರಿಶೀಲಿಸಲು ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ (MHRD) ಯಿಂದ ಹಣಕಾಸಿನ ನೆರವು ಪಡೆದು ಮೌಲ್ಯಮಾಪನ ನಡೆಸಿದ ಸ್ವತಂತ್ರ ಸಂಸ್ಥೆಯೊಂದರ ಅಧ್ಯಯನ ವರದಿ ಇನ್ನೂ ಸಹ ಉಲ್ಲೇಖಿಸಲು ಸಾಧ್ಯವಾಗದ ಕರಡು ರೂಪದಲ್ಲಿಯೇ ಇದ್ದು, ಅದು ಈ ನಮ್ಮ ಚರ್ಚೆಯ ಭಾಗವಾಗಿಲ್ಲ. ನಮಗೆ ತಿಳಿದಿರುವ ಪ್ರಕಾರ, ಸ್ವತಂತ್ರವಾಗಿ ನಡೆದ ಒಟ್ಟಾರೆ ಮೌಲ್ಯಮಾಪನ ಡಿಪಿಇಪಿ ಮಧ್ಯಪ್ರವೇಶಿಕೆಯ ಒಟ್ಟು ವಿನ್ಯಾಸದ ಭಾಗವಾಗಿರಲಿಲ್ಲ.

   ಡಿಪಿಇಪಿಯ ವಾರ್ಷಿಕ ವರದಿಗಳನ್ನು ಮಾತ್ರವೇ ನೈಜ ಸಾರ್ವಜನಿಕ ದಾಖಲೆಗಳೆಂದು ಪರಿಗಣಿಸಬಹುದಾಗಿದೆ. ಅವು ಕಾರ್ಯಕ್ರಮದ ಸಂಪೂರ್ಣ ಪ್ರಗತಿ ಹಾಗೂ ಸಾಧನೆಗಳ ಸಾರಾಂಶವನ್ನು ಸಾದರಪಡಿಸುತ್ತವೆ. ಇವುಗಳಲ್ಲಿ ಕೆಲವು ಅಂಕಿಅಂಶಗಳನ್ನು ಕೊಡಲಾಗಿದೆ. ಒಟ್ಟು ಆದಾಯ ಮತ್ತು ವೆಚ್ಚ ಹಾಗೂ ಜಿಲ್ಲಾವಾರು ಆದಾಯ ಮತ್ತು ಖರ್ಚುವೆಚ್ಚ ಇವೆರಡೂ ಸೇರಿದಂತೆ ಕಾರ್ಯಕ್ರಮಕ್ಕೆ ಸಂಬಂಧಿಸಿದ ಪ್ರತಿ ಹಣಕಾಸು ವರ್ಷದ ಲೆಕ್ಕಪರಿಶೋಧಿತ ವರದಿಗಳನ್ನು ಕೂಡ ಪ್ರಕಟಿಸಲಾಗುತ್ತದೆ. ಇವೆಲ್ಲಾ ದಾಖಲೆಗಳಲ್ಲಿ ಲಭ್ಯವಿರುವ

ಮಾಹಿತಿಗಳನ್ನು ಕಾರ್ಯಕ್ರಮದ ಕುರಿತ ನಮ್ಮ ಮೌಲ್ಯಮಾಪನದಲ್ಲಿ ನಾವು ಪರಿಶೀಲಿಸಿದ್ದೇವೆ ಹಾಗೂ ಕೆಲವು ಅಂಶಗಳನ್ನು ಅಲ್ಲಿಂದ ತೆಗೆದುಕೊಂಡಿದ್ದೇವೆ. ಕಾರ್ಯಕ್ರಮದ ಕುರಿತು ನಮಗೆ ತಿಳಿದಿರುವ, ನಾವು ಕೇಳಿಸಿಕೊಂಡಿರುವ ಹಲವಾರು ಅಂಶಗಳು ವಾರ್ಷಿಕ ವರದಿಗಳಲ್ಲಿ ಉಲ್ಲೇಖವಾಗಿಲ್ಲ ಅಥವಾ ಅಸಮರ್ಪಕವಾದ ರೀತಿಯಲ್ಲಿ ಅವು ವರದಿಯಾಗಿರುವುದು ನಮಗೆ ಕಂಡುಬಂದಿದೆ. ಕಾರ್ಯಕ್ರಮ ಹಾಗೂ ಅದರ ಚಟುವಟಿಕೆಗಳಿಗೆ ಸಂಬಂಧಿಸಿದ ಅಂಕಿಅಂಶಗಳ ಮಾಹಿತಿ ಅಸಮರ್ಪಕವಾಗಿದೆ ಅಥವಾ ತುಲನಾತ್ಮಕ ವಿಶ್ಲೇಷಣೆ ಮತ್ತು ಅಧ್ಯಯನಗಳಿಗೆ ಅನುಕೂಲಕರವಾಗಿಲ್ಲ. ಡಿಪಿಇಪಿಯ ಸಂಚಯಿತ ದತ್ತಾಂಶ ಡಿಪಿಇಪಿಗಿಂತ ಮೊದಲಿದ್ದ ಪರಿಸ್ಥಿತಿ ಅಥವಾ ಡಿಪಿಇಪಿ ಇಲ್ಲದ ಜಿಲ್ಲೆಗಳ ಪರಿಸ್ಥಿತಿಗಳೊಂದಿಗೆ ಹೋಲಿಕೆಗಳನ್ನು ಒದಗಿಸುವ ಅಥವಾ ಅಂಥವುಗಳನ್ನು ಹೊರತರುವುದರ ಪ್ರಾಮುಖ್ಯತೆಯನ್ನು ಕಡೆಗಣಿಸುತ್ತದೆ. ಡಿಪಿಇಪಿಗಾಗಿ ಇರುವ ಮಾರ್ಗಸೂಚಿಗಳು ಕಾರ್ಯಕ್ರಮದ ವಿಚಾರದಲ್ಲಿ 'ಅತಿಯಾದ ಜಿಪುಣತನ'ವನ್ನು ತೋರಿಸತ್ತವೆ [MHRD: 1995:9]. ಆದಾಗ್ಯೂ, ವಾರ್ಷಿಕ ವರದಿಗಳು ವರ್ಣರಂಜಿತ ದಾಖಲೆಗಳಾಗಿದ್ದು, ಅದ್ದೂರಿಯಾಗಿ ಕರ್ಚು ಮಾಡಿ ಹಣದ ಹೊಳೆಯನ್ನೇ ಹರಿಸಿರುವುದನ್ನು ಇದು ಸೂಚಿಸುತ್ತದೆ.

3. ವಿಶ್ವ ಬ್ಯಾಂಕ್‌ನ ಹೆಲೆನ್ ಅಬಾಡಿ(2001) ಅವರ ಪ್ರಕಾರ ಈ ಯೋಜನೆಯ 'ಸಮಸ್ಯೆ'ಗಳಲ್ಲಿ ಒಂದೆಂದರೆ, ಬ್ಯಾಂಕ್‌ಸ್ವತಂತ್ರವಾಗಿ ಮೌಲ್ಯಮಾಪನ ಮಾಡಲು ಸಾಧ್ಯವಾಗದಿರುವುದು ಮತ್ತು ಅದು ಭಾರತ ಸರ್ಕಾರದ ಮಧ್ಯಸ್ಥಿಕೆಯ ಪಾತ್ರದ ನಿರ್ಬಂಧದಿಂದ ಮುಕ್ತವಾಗಿಲ್ಲದಿರುವುದು.
4. (**ಮೂಲದಲ್ಲಿ ನಾಲ್ಕನೇ ಟಿಪ್ಪಣಿ ಇಲ್ಲ**)
5. ಈ ಅಧ್ಯಯನ ಮಾನದಂಡರಹಿತ ಪರೀಕ್ಷೆಗಳನ್ನು ಕೈಗೊಂಡಿದೆ. ಮಾತ್ರವಲ್ಲದೆ ಅದು ಡಿಪಿಇಪಿ ಇಲ್ಲದ ಜಿಲ್ಲೆಗಳೊಂದಿಗಿನ ಹೋಲಿಕೆಯನ್ನು ಒಳಗೊಂಡಿಲ್ಲ.
6. VIIನೇ ತರಗತಿಯ ಫಲಿತಾಂಶಗಳ ದತ್ತಾಂಶದ ಪ್ರಮುಖ ಸಮಸ್ಯೆಯೆಂದರೆ ಉತ್ತೀರ್ಣಗೊಂಡಿರುವ ಹೆಚ್ಚುಕಡಿಮೆ ಶೇಕಡಾವಾರು ಪ್ರಮಾಣವು ಸಾಮೂಹಿಕ ನಕಲು ಹಾಗೂ ಅಲ್ಲಲ್ಲಿ ಉದಾರ ಮೌಲ್ಯಮಾಪನ ಮಾಡಿರುವುದನ್ನು ತೋರಿಸುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, 10ನೇ ತರಗತಿ ಅಥವಾ ಎಸ್‌ಎಸ್‌ಎಲ್‌ಸಿ ತೇರ್ಗಡೆಯ ಫಲಿತಾಂಶ ಕೇವಲ 50 ಪ್ರತಿಶತದಷ್ಟು ಇದೆ.
7. ಈ ವಾರ್ಷಿಕ ವರದಿಗಳನ್ನು ಯಾರನ್ನು ಉದ್ದೇಶಿಸಿ ತಯಾರಿಸಲಾಗಿದೆ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ. ಅದು ಈ ವರದಿಗಳು ಒಳಗೊಂಡಿರುವ ದತ್ತಾಂಶ ಹಾಗೂ ವಿಶ್ಲೇಷಣೆ ಇವೆರಡೂ ದುರ್ಬಲವಾಗಿರಲು ದಾರಿಮಾಡಿಕೊಟ್ಟಿವೆ.
8. ವಿಭಿನ್ನ ದಾಖಲೆಗಳಲ್ಲಿ ಪ್ರಸ್ತುತಪಡಿಸಲಾಗಿರುವ ಅಂತಹ ಅಂಕಿಅಂಶಗಳು ಅಲ್ಲಲ್ಲಿ ಸಾಕಷ್ಟು ವ್ಯತ್ಯಾಸದಿಂದ ಕೂಡಿವೆ ಮತ್ತು ಅವುಗಳನ್ನು ಸಮನ್ವಯಗೊಳಿಸುವ ಯಾವುದೇ ಪ್ರಯತ್ನಗಳು ನಡೆದಿಲ್ಲ.
9. ರಾಜ್ಯ ಶಿಕ್ಷಣದ ಬಜೆಟ್‌ನಲ್ಲಿ ಡಿಪಿಇಪಿಗಾಗಿ ತನ್ನ ಕೊಡುಗೆಯ ಕುರಿತು ಪ್ರತ್ಯೇಕವಾಗಿ ನಮೂದಿಸಲಾಗಿಲ್ಲ. ರಾಜ್ಯದಿಂದ ಹಣವನ್ನು ಸ್ವೀಕರಿಸಲಾಗಿದೆ ಎಂದು ಡಿಪಿಇಪಿ ಖಾತೆಗಳು ತೋರಿಸುತ್ತವೆ. ರಾಜ್ಯ ಬಜೆಟ್‌ನಲ್ಲಿ ಅದು ಯಾವ ಖಾತೆಯ ಅಡಿಯಲ್ಲಿ ಸಂದಾಯಗೊಳ್ಳುತ್ತದೆ ಎಂಬುದರ ಸ್ಪಷ್ಟತೆ ಇಲ್ಲ.
10. ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಕುರಿತ ರಾಜ್ಯದ ಸಮೀಕ್ಷೆಗಳು [ಭಾರತ ಸರ್ಕಾರ 2001, 2001] ವಿಶ್ವಾಸಾರ್ಹವಾಗಿಲ್ಲ. ಈ ಅಂಕಿಅಂಶಗಳನ್ನು ಕಡಿಮೆ ತೋರಿಸಿ ವರದಿಮಾಡಲಾಗುತ್ತದೆ ಎಂಬುದನ್ನು ಕರ್ನಾಟಕದ ಅತ್ಯಂತ ಹಿಂದುಳಿದ ಜಿಲ್ಲೆಗಳಲ್ಲಿ ಒಂದಾದ ಚಾಮರಾಜನಗರದಲ್ಲಿ ನಮ್ಮ ಇತ್ತೀಚಿನ ಕ್ಷೇತ್ರಕಾರ್ಯ ತೋರಿಸಿಕೊಟ್ಟಿದೆ.
11. ಕರ್ನಾಟಕ ಸರ್ಕಾರವೇ ಧನ ಸಹಾಯ ನೀಡಿದ ಮತ್ತು ಸಂಘಟಿಸಿದ 'ಎಡ್ಯುವಿಶನ್' ವಿಚಾರ ಸಂಕಿರಣ ಫೆಬ್ರುವರಿ 22, 2002ರಂದು ನಡೆಯಿತು. ಸರ್ಕಾರದ ಹೊಸ ಶಿಕ್ಷಣ ನೀತಿಯನ್ನು

ಘೋಷಿಸುವುದು ಹಾಗೂ ಆ ಕುರಿತು ಚರ್ಚಿಸುವುದು ಈ ವಿಚಾರ ಸಂಕಿರಣದ ಉದ್ದೇಶವಾಗಿತ್ತು ಎಂದು ವರದಿಯಾಗಿದೆ.

12. ಕರ್ನಾಟಕ ಸರ್ಕಾರ ನೇಮಿಸಿದ ಹಲವು ಕಾರ್ಯಪಡೆಗಳಲ್ಲಿ ಶಿಕ್ಷಣ ಕಾರ್ಯಪಡೆಯೂ ಒಂದು. ಡಾ ರಾಜಾ ರಾಮಣ್ಣ ಅವರನ್ನು ಶಿಕ್ಷಣ ಕಾರ್ಯಪಡೆಯ ಅಧ್ಯಕ್ಷರನ್ನಾಗಿ ನಿಯೋಜಿಸಲಾಗಿತ್ತು. ಚರ್ಚೆಗಳಾದ ನಂತರ ತಿಂಗಳಿಗೊಮ್ಮೆ ಸಭೆಗಳನ್ನು ನಡೆಸಲಾಯಿತು ಮತ್ತು ಶಿಕ್ಷಣ ಕಾರ್ಯಪಡೆಯು ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ಮಾತ್ರ ಗಮನಹರಿಸುವುದಾಗಿ ನಿರ್ಧರಿಸಿತು. ಯಾವುದೇ ವಿಷಯ ಅಥವಾ ಪರಿಕಲ್ಪನೆಯ ಮೇಲೆ ಬರವಣಿಗೆಯ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿಲ್ಲ ಅಥವಾ ಯಾವುದೇ ದೃಷ್ಟಿಕೋನದ ಮೇಲೆ ಕೃತಿಗಳನ್ನಾಗಲೀ ಹೊರತರಲಿಲ್ಲ. ಶಿಕ್ಷಣ ಕಾರ್ಯಪಡೆಯ ಶಿಫಾರಸುಗಳನ್ನು ಒಂದು ವರ್ಷದ ನಂತರ ರಾಜ್ಯಕ್ಕೆ ಸಲ್ಲಿಸಲಾಯಿತು.

13. ರಾಜ್ಯವು ಶಿಕ್ಷಣ ಕ್ಷೇತ್ರದಲ್ಲಿ ಬೇರೆ ಬೇರೆ ರೀತಿಯ ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ. ಕಾಲೇಜುಗಳಿಗೆ ನೀಡಲಾಗುತ್ತಿದ್ದ ಅನುದಾನವನ್ನು ಹಿಂತೆಗೆದುಕೊಳ್ಳುವ ಅದರ ನಿರ್ಧಾರ ದೊಡ್ಡ ಪ್ರಮಾಣದ ಪ್ರತಿಭಟನೆಗಳಿಗೆ ಕಾರಣವಾಯಿತು. ತರುವಾಯ ಸರ್ಕಾರ ಈ ಆದೇಶವನ್ನು ಹಿಂದಕ್ಕೆ ಪಡೆಯಿತು, ಆದರೆ, ಮತ್ತೆ ಕಾಲೇಜುಗಳಿಗೆ ನೀಡುತ್ತಿರುವ ಅನುದಾನವನ್ನು ಕಡಿಮೆಗೊಳಿಸುವ ಚಿಂತನೆ ನಡೆದಿದೆ. ಸರ್ವೋಚ್ಚ ನ್ಯಾಯಾಲಯದ ಆದೇಶ ಇದ್ದರೂ ಕೂಡ ರಾಜ್ಯದ ಏಳು ಜಿಲ್ಲೆಗಳಲ್ಲಿ ಮಾತ್ರ ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ಜಾರಿಗೊಳಿಸಲಾಗಿದೆ. ರಾಜ್ಯದಲ್ಲಿ ಇತ್ತೀಚೆಗೆ ಆನ್‌ಲೈನ್‌ಲಾಟರಿಗಳ ವಿರುದ್ಧ ಸಾರ್ವಜನಿಕ ಟೀಕೆಗಳು ಬಲಪಡೆದುಕೊಳ್ಳುತ್ತಿದ್ದಂತೆ ಲಾಟರಿಗಳ ಮಾರಾಟ ರಾಜ್ಯದ ಬಿಸಿ ಊಟವನ್ನು ಬೆಂಬಲಿಸುತ್ತದೆ ಎಂದು ಜಾಹೀರಾತು ಫಲಕಗಳನ್ನು ಅಳವಡಿಸಲು ಲಾಟರಿ ಕಂಪನಿಗಳಿಗೆ ಸರ್ಕಾರ ಅನುಮತಿ ನೀಡಿದೆ. ಇದರ ಜೊತೆಯಲ್ಲೆ 'ಅಕ್ಷರ ದಾಸೋಹ' ಎಂಬ ಮಧ್ಯಾಹ್ನದ ಬಿಸಿಯೂಟದ ಯೋಜನೆಯನ್ನು ಘೋಷಣೆ ಮಾಡಲಾಗಿದೆ. ರಾಜ್ಯವು ಪ್ರಸ್ತುತ ಖಾಸಗಿ ವೃತ್ತಿಪರ ಕಾಲೇಜುಗಳ ವ್ಯವಸ್ಥಾಪಕರೊಂದಿಗೆ ಸೀಟು ಹಂಚಿಕೆ ಮತ್ತು ವಿತರಣೆಯ ಕುರಿತ ಬಿಕ್ಕಟ್ಟಿನಲ್ಲಿ ಸಿಲುಕಿದೆ.

---ಮುಕ್ತಾಯ---

(Reviewer note: translator not enclosed reference list from original English text)